ಡಿಸೆಂಬರ್ 2020, ಸಂಚಿಕೆ 4

*Magazine on Low External Input Sustainable Agriculture*
*Compilation of selected translated articles into Kannada*

ಬಾಹ್ಯ ಪರಿಕರಗಳ ಮಿತ ಬಳಕೆಯ ಸುಸ್ಥಿರ ಕೃಷಿ ಕುರಿತ ಮ್ಯಾಗಜಿನ್.
ಕನ್ನಡಕ್ಕೆ ಅನುವಾದಿಸಿದ ಆಯ್ದ ಲೇಖನಗಳ ಸಂಕಲನ

# LEISA INDIA
# ಲೀಸಾ ಇಂಡಿಯ
## ವಿಶೇಷ ಕನ್ನಡ ಸಂಚಿಕೆ



# ಲೀಸಾ ಇಂಡಿಯ

**ವಿಶೇಷ ಕನ್ನಡ ಸಂಚಿಕೆ**

**ಡಿಸೆಂಬರ್ 2020, ಸಂಚಿಕೆ 4**

ಈ ಸಂಚಿಕೆಯು 'ಲೀಸಾ ಇಂಡಿಯ' ಆಂಗ್ಲ ಆವೃತ್ತಿಯಲ್ಲಿ ಪ್ರಕಟವಾದ ಆಯ್ದ ಲೇಖನಗಳ ಅನುವಾದಗಳನ್ನು ಒಳಗೊಂಡಿದೆ.

**ವಿಳಾಸ:** ಎ.ಎಂ.ಇ. ಪ್ರತಿಷ್ಠಾನ
ನಂ.204, 100 ಫೀಟ್ ರಿಂಗ್‌ರೋಡ್
ಮೂರನೇ ಫೇಸ್
ಬನಶಂಕರಿ ಎರಡನೇ ಬ್ಲಾಕ್
ಮೂರನೇ ಸ್ಟೇಜ್
ಬೆಂಗಳೂರು 560085
ದೂರವಾಣಿ+91-080-26699512/ 26699522
ಫ್ಯಾಕ್ಸ್ +91-080-26699410
ಈಮೈಲ್: leisaindia@yahoo.co.in

**ಲೀಸಾ ಇಂಡಿಯ**
'ಲೀಸಾ ಇಂಡಿಯ' ಆಂಗ್ಲ ಆವೃತ್ತಿಯನ್ನು ಎ.ಎಂ.ಇ. ಪ್ರತಿಷ್ಠಾನ ಹಾಗೂ ಇಳೆಯ (ILEIA) ಸಂಸ್ಥೆ ಸಹಯೋಗದೊಂದಿಗೆ ತ್ರೈಮಾಸಿಕವಾಗಿ ಪ್ರಕಟಿಸುತ್ತಿದೆ.

**ಸಂಪಾದಕೀಯ ಮಂಡಳಿ**
**ಮುಖ್ಯ ಸಂಪಾದಕ :** ಕೆ.ವಿ.ಎಸ್.ಪ್ರಸಾದ್
**ವ್ಯವಸ್ಥಾಪಕ ಸಂಪಾದಕಿ :** ಟಿ.ಎಂ.ರಾಧ
**ಕನ್ನಡ ಅನುವಾದ**
ಹೇಮಾ ಹೆಬ್ಬಗೋಡಿ
**ಕನ್ನಡ ಅನುವಾದಗಳ ಸಮನ್ವಯ**
ವೀಣಾ ಮಾರ್ಕಾಂಡೆ
**ಕಾರ್ಯ ನಿರ್ವಹಣೆ**
ರುಕ್ಮಿಣಿ ಜಿ.ಜಿ.
**ಪುಟ ವಿನ್ಯಾಸ**
ನಂದ ಕುಮಾರ್
**ಮುದ್ರಣ**
ಬ್ಲೂಸ್ಟ್ರೀಮ್ ಪ್ರಿಂಟಿಂಗ್, ಬೆಂಗಳೂರು
**ಮುಖಪುಟ ಚಿತ್ರ**
ಪ್ಲಾಂಟೇಶನ್ ಪ್ರಕ್ರಿಯೆಯ ಮೂಲಕ ವಿವಿಧ ಚಟುವಟಿಕೆಗಳಲ್ಲಿ ತೊಡಗಿರುವ ಗ್ರಾಮೀಣ ಸಮುದಾಯಗಳು
**ಚಿತ್ರ ಸೌಜನ್ಯ:** Grow- Trees

## ಲೀಸಾ ಮ್ಯಾಗಜೀನ್
**ವಿವಿಧ ಆವೃತ್ತಿಗಳು**
ಲ್ಯಾಟಿನ್ ಅಮೇರಿಕನ್, ಪಶ್ಚಿಮ ಆಫ್ರಿಕನ್ ಮತ್ತು ಬ್ರೆಜಿಲಿಯನ್ ಆವೃತ್ತಿಗಳು

## ಲೀಸಾ ಇಂಡಿಯ ಮ್ಯಾಗಜೀನ್
**ಇತರೆ ಪ್ರಾದೇಶಿಕ ಆವೃತ್ತಿಗಳು**
ಹಿಂದಿ, ಒರಿಯಾ, ಮರಾಠಿ, ಪಂಜಾಬಿ, ತಮಿಳು ಮತ್ತು ತೆಲುಗು

**ಈ ಸಂಚಿಕೆಯಲ್ಲಿ ಪ್ರಕಟವಾದ ವಿಷಯಗಳನ್ನು ಎಲ್ಲಾ ರೀತಿಯ ಎಚ್ಚರಿಕೆಯಿಂದ ಪರಿಶೀಲಿಸಿ ಸಾಧ್ಯವಾದಷ್ಟು ಸರಿಯಾಗಿ ನೀಡಲು ಪ್ರಯತ್ನಿಸಲಾಗಿದೆ. ಹೀಗಿದ್ದೂ, ಅಂತಿಮವಾಗಿ ಇಲ್ಲಿ ಪ್ರಕಟವಾದ ಲೇಖನಗಳಲ್ಲಿರುವ ವಿಷಯಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಇಲ್ಲಿ ಪ್ರಕಟವಾದ ಲೇಖನಗಳ ಪಡಿಯಚ್ಚನ್ನು ಮಾಡಿ ಇತರ ಓದುಗರಿಗೆ ಹಂಚಲು ಸಂಪಾದಕೀಯ ಮಂಡಳಿಯ ಒಪ್ಪಿಗೆಯಿದೆ.**

**ಮಿಸೆರಿಯೊರ್ ನೆರವಿನೊಂದಿಗೆ ಎ.ಎಂ.ಇ. ಪ್ರತಿಷ್ಠಾನದಿಂದ ಪ್ರಕಟಿತ.**

## ಪ್ರಿಯ ಓದುಗರೇ.

ಪ್ರಿಯ ಓದುಗರೇ,

ಲೀಸಾ ಇಂಡಿಯಾದ ಡಿಸೆಂಬರ್ 2020ರ ಸಂಚಿಕೆಯನ್ನು ತಮ್ಮೊಂದಿಗೆ ಹಂಚಿಕೊಳ್ಳಲು ಸಂತಸವಾಗುತ್ತಿದೆ. ಈ ಸಂಚಿಕೆಯಲ್ಲಿ ಮುಖ್ಯವಾಗಿ ಪರಿಸರ ವ್ಯವಸ್ಥೆಯನ್ನು ಸಂರಕ್ಷಿಸುವ ಸಲುವಾಗಿ ಅಳವಡಿಸಿಕೊಂಡಿರುವ ನೂತನ ಕೃಷಿಪರಿಸರ ಕ್ರಮಗಳು ಮತ್ತು ವಿಧಾನಗಳ ಕುರಿತು ಬೆಳಕು ಚೆಲ್ಲಲಾಗಿದೆ.

ಕೃಷಿಯ ಸವಾಲುಗಳನ್ನು ಎದುರಿಸುವ ಸಲುವಾಗಿ ಸಮಸ್ಯೆಯನ್ನು ಬಗೆಹರಿಸುವ ನೂತನ ವಿಧಾನಗಳು, ಹೊಸರೀತಿಯ ಆಲೋಚನೆಗಳು, ಹೊಸ ಭಾಗಿದಾರಿಕೆಗಳನ್ನು ಅನ್ವೇಷಿಸಿ ಅಳವಡಿಸಿಕೊಳ್ಳಬೇಕಿದೆ. ಆಹಾರವನ್ನು ಬೆಳೆಯುವ, ಸಂಸ್ಕರಿಸುವ, ಸಾಗಾಣಿಕೆ ಮಾಡುವ, ಶೇಖರಿಸುವ, ವಿತರಿಸುವ ಮತ್ತು ಬಳಸುವ ಕುರಿತು ಬದಲಾವಣೆಗಳಾಬೇಕಿದೆ. ಕೃಷಿಪರಿಸರವನ್ನು ಕಾಪಾಡುವಲ್ಲಿ ಮಹಿಳೆಯರು ಪ್ರಮುಖ ಪಾತ್ರ ವಹಿಸುತ್ತಾರೆ. ಸವಿತ ಉದಯ್ ಅವರ ಕತೆ ಸ್ಫೂರ್ತಿದಾಯಕವಾದದ್ದು. ಮಹಿಳೆಯರು ತಮ್ಮ ಸಂಪರ್ಕಜಾಲದ ಮೂಲಕ ಕೃಷಿಪರಿಸರ ಪದ್ಧತಿಗಳನ್ನು ಪಸರಿಸುವಲ್ಲಿ ಮುಖ್ಯ ಪಾತ್ರ ವಹಿಸಿದರು. ಅವರು ತಮ್ಮ ಸಮುದಾಯದ ಸಂಪರ್ಕಗಳು ಮತ್ತು ಸ್ವ ಸಹಾಯ ಗುಂಪುಗಳ ಮೂಲಕ ಹಳ್ಳಿಯಿಂದ ಹಳ್ಳಿಗೆ ಈ ಕೃಷಿಪರಿಸರ ಪದ್ಧತಿಗಳನ್ನು ಪಸರಿಸಿದರು. ಇದರಿಂದ ಕುಟುಂಬದ ಪೌಷ್ಟಿಕತೆ ವೃದ್ಧಿಯಾಗುವುದರೊಂದಿಗೆ ಅವರ ಆದಾಯ ಮತ್ತು ಮಣ್ಣಿನ ಆರೋಗ್ಯವು ವೃದ್ಧಿಸಿತು. ಜೊತೆಗೆ ಅವರ ಸಂಸ್ಥೆಗಳು ಮತ್ತು ಸಮಾಜದಲ್ಲಿನ ಅವರ ಗೌರವ ಕೂಡ ಅಭಿವೃದ್ಧಿಗೊಂಡಿತು.

ಕೃಷಿಪರಿಸರವು ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳ ಗಮನಸೆಳೆಯುತ್ತಿದೆ. ಕೇರಳ ರಾಜ್ಯದ ಅಲಪ್ಪುಜ ಜಿಲ್ಲೆಯ ಪತಿಯೂರ್ ಪಂಚಾಯ್ತಿಯಲ್ಲಿ ICARನವರು ರೂಪಿಸಿದ ಕಾರ್ಯಕ್ರಮದಡಿಯಲ್ಲಿ ಸಂಪನ್ಮೂಲಗಳ ಮರುಬಳಕೆಯನ್ನು 1000 ಕೃಷಿಕುಟುಂಬಗಳು 2016ರಲ್ಲಿ ಅಳವಡಿಸಿಕೊಂಡವು. ಸಂಕಲ್ಪತರು ತಂತ್ರಜ್ಞಾನ ಮತ್ತು ಪರಿಸರದ ಸಮನ್ವಯವನ್ನು ಹೊಸರೀತಿಯಲ್ಲಿ ಕಂಡುಕೊಳ್ಳುವ ಮೂಲಕ ಸಮಯ ಮತ್ತು ಸ್ಥಳದ ಅಭಾವವಿರುವವರು ಮರಗಳನ್ನು ನೆಡುವ ಅವಕಾಶ ಕಲ್ಪಿಸುವ ಮೂಲಕ ಪರಿಸರಕ್ಕೆ ತಮ್ಮ ಕೊಡುಗೆಯನ್ನು ನೀಡುವ ಅವಕಾಶ ಮಾಡಿಕೊಟ್ಟಿತು. ಈ ಕ್ರಮವು ಜನರನ್ನು ನಿಸರ್ಗದೊಂದಿಗೆ ಬೆಸೆಯುವುದರೊಂದಿಗೆ ಗ್ರಾಮೀಣ ಸಮುದಾಯಗಳ ಜೀವನಮಟ್ಟವನ್ನು ಸುಧಾರಿಸುವಲ್ಲಿಯೂ ನೆರವು ನೀಡುತ್ತಿದೆ.

ಈ ಸಂಚಿಕೆ ನಿಮಗೆ ಇಷ್ಟವಾಗುತ್ತದೆಯೆಂದು ಭಾವಿಸಿದ್ದೇವೆ. ನಿಮ್ಮ ಪ್ರತಿಕ್ರಿಯೆಗಳಿಗಾಗಿ ಕಾದಿರುತ್ತೇವೆ.

ಸಂಪಾದಕರು.

## ಲೀಸಾ LEISA www.leisaindia.org

ಲೀಸಾ (LEISA)ವು ಬಾಹ್ಯ ಪರಿಕರಗಳ ಮಿತ ಬಳಕೆಯ ಸುಸ್ಥಿರ ಕೃಷಿಯ ಕುರಿತಾಗಿದೆ. ಇದು ಪಾರಿಸರಿಕವಾಗಿ ಯೋಗ್ಯವಾದ ವಿಧಾನದಲ್ಲಿ ತಮ್ಮ ಉತ್ಪಾದಕತೆ ಮತ್ತು ವರಮಾನವನ್ನು ಹೆಚ್ಚಿಸಿಕೊಳ್ಳಲು ಬಯಸುವ ರೈತರಿಗೆ ಇರುವ ತಾಂತ್ರಿಕ ಮತ್ತು ಸಾಮಾಜಿಕ ಆಯ್ಕೆಗಳ ಕುರಿತಾಗಿದೆ. ಲೀಸಾವು ಸ್ಥಳೀಯ ಸಂಪನ್ಮೂಲ ಮತ್ತು ನೈಸರ್ಗಿಕ ವಿಧಾನಗಳ ಹಿತ ಬಳಕೆಯ - ಒಂದೊಮ್ಮೆ ಅಗತ್ಯವೆನಿಸಿದರೆ ಬಾಹ್ಯ ಒಳಸುರಿಗಳ ಸುರಕ್ಷಿತ ಮತ್ತು ದಕ್ಷ ಬಳಕೆಯ - ಕುರಿತಾಗಿದೆ. ಇದು ತಮ್ಮ ಸ್ವಂತ ಜ್ಞಾನ, ಕೌಶಲ್ಯ, ಮೌಲ್ಯ, ಸಂಸ್ಕೃತಿ ಮತ್ತು ಸಂಸ್ಥೆಗಳನ್ನು ಮೂಲವಾಗಿಸಿಕೊಂಡು ಭವಿಷ್ಯವನ್ನು ಕಟ್ಟಿಕೊಳ್ಳಲು ಬಯಸುವ ಪುರುಷ ಮತ್ತು ಮಹಿಳಾ ರೈತರನ್ನು ಸಬಲರನ್ನಾಗಿಸುವುದು ಮತ್ತು ಸಮುದಾಯಗಳ ಕುರಿತಾಗಿದೆ. ಲೀಸಾವು ಕೃಷಿಯನ್ನು ಸುಧಾರಿಸುವ ಮತ್ತು ಅದನ್ನು ಬದಲಾಗುತ್ತಿರುವ ಅಗತ್ಯ ಮತ್ತು ಸನ್ನಿವೇಶಗಳಿಗೆ ತಕ್ಕಂತೆ ಹೊಂದಿಸುವ ಕೃಷಿಕರು ಮತ್ತು ಇತರೆ ಪಾತ್ರಧಾರಿಗಳ ಸಾಮರ್ಥ್ಯವನ್ನು ಬಲಪಡಿಸುವ ಭಾಗೇದಾರಿ ವಿಧಾನಗಳ ಕುರಿತಾಗಿದೆ. ಲೀಸಾವು ದೇಸಿ ಮತ್ತು ವೈಜ್ಞಾನಿಕ ಜ್ಞಾನವನ್ನು ಮಿಳಿತಗೊಳಿಸಲು ಬಯಸುತ್ತದೆ ಮತ್ತು ಈ ಕುರಿತ ಹೆಚ್ಚಿನ ಬೆಳವಣಿಗೆಗೆ ಅನುಕೂಲಕರ ವಾತಾವರಣವನ್ನು ಸೃಜಿಸಲು ನೀತಿ ನಿರೂಪಣೆಯ ಮೇಲೆ ಪ್ರಭಾವ ಬೀರಬಯಸುತ್ತದೆ. ಲೀಸಾವು ಒಂದು ಪರಿಕಲ್ಪನೆಯಾಗಿದೆ; ಒಂದು ಮಾರ್ಗ ಮತ್ತು ಒಂದು ರಾಜಕೀಯ ಸಂದೇಶವಾಗಿದೆ.

## ಎ ಎಂ ಇ ಪ್ರತಿಷ್ಠಾನ www.amefound.org

ಎ ಎಂ ಇ ಪ್ರತಿಷ್ಠಾನವು ಬೇಸಾಯದ ಪರ್ಯಾಯಗಳನ್ನು ರೂಪಿಸುವ, ಕೃಷಿಕರ ಅರಿವನ್ನು ಸಿರಿವಂತಗೊಳಿಸುವ, ಅಭ್ಯುದಯ ಸಂಸ್ಥೆಗಳನ್ನು ಒಗ್ಗೂಡಿಸುವ ಮತ್ತು ಅನುಭವಗಳನ್ನು ಹಂಚಿಕೊಳ್ಳುವ ಮೂಲಕ ದಕ್ಷಿಣ ಪ್ರಸ್ಥಭೂಮಿಯ ಅರೆ ಒಣ ಪ್ರದೇಶಗಳ ಸಣ್ಣ ಮತ್ತು ಮಧ್ಯಮ ಕೃಷಿಕರಲ್ಲಿ ಪಾರಿಸರಿಕ ಕೃಷಿಯನ್ನು ಉತ್ತೇಜಿಸುತ್ತಿದೆ.

**ವಿಶ್ವಸ್ಥರು**
**ಚೇರ್ಮನ್** : ಶ್ರೀ ಚಿರಂಜೀವಿ ಸಿಂಗ್, ಐ.ಎ.ಎಸ್. (ನಿ.)
**ಖಜಾಂಚಿ** : ಡಾ.ಎನ್.ಜಿ.ಹೆಗಡೆ,
**ಸದಸ್ಯರು** : ಡಾ.ಎಂ.ಮಹಾದೇವಪ್ಪ, ಡಾ.ಟಿ.ಎಂ. ತ್ಯಾಗರಾಜನ್, ಪ್ರೊ.ವಿ.ವೀರಭದ್ರಯ್ಯ, ಡಾ.ಎ.ರಾಜಣ್ಣ, ಡಾ.ವೆಂಕಟೇಶ್ ತಗತ್, ಡಾ.ಸ್ಮಿತಾ ಪ್ರೇಮಚಂದರ್, ಶ್ರೀ ಅಶೋಕ್ ಚಟರ್ಜಿ
**ಕಾರ್ಯಕಾರಿ ನಿರ್ದೇಶಕರು:** ಶ್ರೀ ಕೆ.ವಿ.ಎಸ್. ಪ್ರಸಾದ್

## ಮಿಸೆರಿಯೊರ್ MISEREOR www.misereor.org

ಅಭಿವೃದ್ಧಿ ಸಹಕಾರ ಸಂಘಟನೆ ಮಿಸೆರಿಯೊರ್‌ನ್ನು ಜರ್ಮನ್ ಕ್ಯಾಥೋಲಿಕ್ ಬಿಶಪ್‌ರು ಇಸವಿ 1958ರಲ್ಲಿ ಸ್ಥಾಪಿಸಿದರು. ಕಳೆದ 50 ವರ್ಷಗಳಿಂದ ಮಿಸೆರಿಯೊರ್ ಆಫ್ರಿಕ, ಏಷಿಯಾ, ಹಾಗೂ ಲ್ಯಾಟಿನ್ ಅಮೇರಿಕಾಗಳಲ್ಲಿ ಬಡತನದ ವಿರುದ್ಧದ ಹೋರಾಟಕ್ಕೆ ವಚನಬದ್ಧವಾಗಿದೆ. ಧರ್ಮ, ಪರಂಪರೆ ಅಥವಾ ಲಿಂಗವನ್ನು ಪರಿಗಣಿಸದೆ ಅಗತ್ಯವಿರುವ ಯಾವುದೇ ಮಾನವ ಜೀವಿಗೂ ಮಿಸೆರಿಯೊರ್‌ನ ಸಹಕಾರ ಲಭ್ಯವಿದೆ.

ಬಡವರು ಮತ್ತು ಅನುಕೂಲರಹಿತರು ನಡೆಸುವ ಮತ್ತು ಮಾಲೀಕತ್ವದ ಯೋಜನೆಗಳಿಗೆ ಮಿಸೆರಿಯೊರ್ ಬೆಂಬಲ ಲಭ್ಯವಿದೆ. ಇದು ಸ್ಥಳೀಯ ಪಾಲುಗಾರರ ಜೊತೆ ಕೆಲಸ ಮಾಡಲು ಮೊದಲ ಆದ್ಯತೆ ನೀಡುತ್ತದೆ. ಅವುಗಳೆಂದರೆ ಚರ್ಚ್-ಆಧಾರಿತ ಸಂಸ್ಥೆಗಳು, ಸರಕಾರೇತರ ಸಂಸ್ಥೆಗಳು, ಸಾಮಾಜಿಕ ಚಳುವಳಿಗಳು ಮತ್ತು ಸಂಶೋಧನ ಸಂಸ್ಥೆಗಳು. ಯೋಜನೆಗಳ ಅನುಷ್ಠಾನ ಮತ್ತು ಸ್ಥಳೀಯ ಅಭಿವೃದ್ಧಿ ಪ್ರಕ್ರಿಯೆಯನ್ನು ರಚಿಸುವಲ್ಲಿ ಫಲಾನುಭವಿಗಳ ಜೊತೆಗೂಡಿ ಪಾಲುಗಾರರು ಸಹಾಯಮಾಡುವಲ್ಲಿ ತೊಡಗಿಸಿಕೊಂಡಿದ್ದಾರೆ. ಈ ರೀತಿಯಾಗಿ ಮಿಸೆರಿಯೊರ್ ತನ್ನ ಪಾಲುಗಾರರೊಡಗೂಡಿ ನಿರಂತರವಾಗಿ ಬದಲಾಗುತ್ತಿರುವ ಸವಾಲುಗಳಿಗೆ ಪ್ರತಿಸ್ಪಂದಿಸುತ್ತದೆ.

# ವಿಷಯಸೂಚಿ




## ಹಸಿರು ಭೂಮಿ – ಸಂಕಲ್ಪತರುವಿನ ಪಯಣದ ಕತೆ

■ ಸಂಕಲ್ಪತರು ಫೌಂಡೇಶನ್

ಸಂಕಲ್ಪತರು ಪರಿಸರದೊಂದಿಗೆ ತಂತ್ರಜ್ಞಾನವನ್ನು ವಿನೂತನ ರೀತಿಯಲ್ಲಿ ಬೆಸೆದಿದೆ. ಗಿಡಗಳನ್ನು ನೆಡಲು ಸಮಯ ಮತ್ತು ಸ್ಥಳದ ಅಭಾವವಿರುವವರು ಇದರ ಮೂಲಕ ಪರಿಸರಕ್ಕೆ ತಮ್ಮಸೇವೆಯನ್ನು ಸಲ್ಲಿಸಬಹುದಾಗಿದೆ. ಇದರ ಮೂಲಕ ವ್ಯಕ್ತಿಗಳನ್ನು ಪರಿಸರದೊಂದಿಗೆ ಬೆಸೆಯುವುದರೊಂದಿಗೆ ಗ್ರಾಮೀಣ ಸಮುದಾಯಗಳ ಬದುಕು ಉತ್ತಮಗೊಳ್ಳಲು ಸಹಕಾರಿಯಾಗಿದೆ.

**4**



## ಸಂಪನ್ಮೂಲಗಳ ಪರಿಣಾಮಕಾರಿ ಮರುಬಳಕೆ – ಅಭಿವೃದ್ಧಿಯ ಉತ್ತಮ ಮಾದರಿ

■ ಅನಿತ ಕುಮಾರಿ ಪಿ ಮತ್ತು ಇಂದುಜಾ ಎಸ್

ಸಾವಯವ ಕೃಷಿ ತ್ಯಾಜ್ಯಗಳ ವ್ಯವಸ್ಥಿತ ಮರುಬಳಕೆ ಮತ್ತು ಮೌಲ್ಯವರ್ಧನೆಯು ತೋಟದ ಉತ್ಪಾದನೆಯನ್ನು ಹೆಚ್ಚಿಸುವುದರೊಂದಿಗೆ ಸ್ವಾವಲಂಬನೆಯನ್ನು ಹೆಚ್ಚಿಸುತ್ತದೆ. ಸಂಪನ್ಮೂಲಗಳ ಮರುಬಳಕೆ ಮಾಡುವ ಮೂಲಕ ರೈತರು ಪರಿಸರ ಸೇವೆಯನ್ನು ಮಾಡಿದಂತಾಗುತ್ತದೆ. ಸಂಪನ್ಮೂಲಗಳ ಮರುಬಳಕೆಯು ಹವಾಮಾನ ತಾಳಿಕೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಅದರಲ್ಲೂ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಇದು ವರದಾನವಾಗಿದೆ.

**8**



## ದೇಸಿ ಸಂಸ್ಕೃತಿಯನ್ನು ಉಳಿಸಿಕೊಳ್ಳುವ ಮೂಲಕ ಸ್ಥಳೀಯ ಜೀವನಮಟ್ಟ ಸುಧಾರಣೆ

■ ಲಕ್ಷ್ಮಿ ಉನ್ನಿತನ್

ಭವಿಷ್ಯದ ಆಹಾರ ಅಗತ್ಯ ಪೂರೈಕೆ, ಸ್ಥಳೀಯ ಸಂಪನ್ಮೂಲಗಳ ಸಂರಕ್ಷಣೆ, ಪೌಷ್ಟಿಕಾಂಶಗಳ ಸುಧಾರಣೆ ಹಾಗೂ ಕೃಷಿ ಮತ್ತು ಕೃಷಿಕರ ಜೀವನಮಟ್ಟ ಸುಧಾರಣೆ ಇವು 21ನೇ ಶತಮಾನದ ಬಹುದೊಡ್ಡ ಸವಾಲುಗಳು. ಈ ಸವಾಲುಗಳನ್ನು ಎದುರಿಸಲು ಸಮಸ್ಯೆ ಪರಿಹರಿಸುವ ಹೊಸ ವಿಧಾನಗಳು, ಹೊಸ ಬಗೆಯ ಚಿಂತನೆ ಮತ್ತು ಹೊಸ ಪಾಲುದಾರಿಕೆಗಳನ್ನು ಅಳವಡಿಸಿಕೊಳ್ಳಬೇಕಾಗಿದೆ.

**12**



## ಸುಸ್ಥಿರ ಕೃಷಿ ಮಾರ್ಗ

ಶ್ರೀ ಮಲ್ಲಿಕಾರ್ಜುನ ಪಾಟೀಲರು ಕರ್ನಾಟಕದ ಧಾರವಾಡ ಜಿಲ್ಲೆಯ ಕಲ್ಘಟ್ಟಿ ತಾಲ್ಲೂಕಿನ ಮುಕ್ಕಾಲು ಹಳ್ಳಿಗೆ ಸೇರಿದವರು. ದೇಶದ ಬಹುತೇಕ ರೈತರು ಕೃಷಿಯಲ್ಲಿ ಆದಾಯವಿಲ್ಲ ಎಂದು ಅದನ್ನು ತೊರೆಯುತ್ತಿರುವಾಗ ಪಾಟೀಲರು ಇವರ ನಡುವೆ ವಿಭಿನ್ನರಾಗಿ ನಿಲ್ಲುತ್ತಾರೆ. ಕೃಷಿಯಿಂದ ಸುಸ್ಥಿರ ಆದಾಯವನ್ನು ಗಳಿಸಬಹುದು ಎಂದು ಸಾಧಿಸಿ ತೋರಿಸಿ ಯುವಜನಾಂಗವು ಕೃಷಿಯಲ್ಲಿ ತೊಡಗಿಕೊಳ್ಳುವುದಕ್ಕೆ ಮಾದರಿಯಾಗಿದ್ದಾರೆ.

**16**



## ಭಾರತದಲ್ಲಿನ ಕೃಷಿವಿಜ್ಞಾನಕ್ಕೆ ಶಕ್ತಿ ತುಂಬಿದ ಮಹಿಳೆಯರ ಗುಂಪು

■ ಸೌಮ್ಯ ಶಂಕರ್ ಬೋಸ್ ಮತ್ತು ಅಮೃತ ಗುಪ್ತಾ ಅವರ ಫೋಟೊಸ್ಟೋರಿ

ವಾಣೀಜ್ಯೀಕರಣ ಮತ್ತು ಕೈಗಾರಿಕರಣಕ್ಕೆ ತುತ್ತಾಗಿರುವ ಕೃಷಿಯಿಂದ ಮಹಿಳಾ ಕೃಷಿಕರು ಕಣ್ಮರೆಯಾಗುತ್ತಿದ್ದಾರೆ. ಭಾರತವು ಇದಕ್ಕೆ ಹೊರತಲ್ಲ. ಭಾರತದ ಶೂನ್ಯಬಂಡವಾಳದ ನೈಸರ್ಗಿಕ ಕೃಷಿ ಪದ್ಧತಿಗಳು ಇದನ್ನು ಬದಲಾಯಿಸಿವೆ (ಸಮುದಾಯ ನಿರ್ವಹಣೆಯ ನೈಸರ್ಗಿಕ ಕೃಷಿ ಎಂದು ಹೇಳಲಾಗುತ್ತದೆ). ಇದನ್ನು ಮಿಲಿಯನ್‌ಗಟ್ಟಲೇ ಸಣ್ಣರೈತರು ಅಳವಡಿಸಿಕೊಂಡಿದ್ದಾರೆ. ಸಾಲ, ಭೂಮಿ ಅಥವ ವಾಣಿಜ್ಯ ಬೀಜಗಳು ಇವೆಲ್ಲ ಮಹಿಳೆಯರಿಗೆ ಸಿಗುವುದು ಕಷ್ಟ. ಆದರೆ ನೈಸರ್ಗಿಕ ಕೃಷಿಯಿಂದ ಇಂದು ಅವರು ಸಬಲ ಕೃಷಿಕರಾಗಿದ್ದಾರೆ.

**17**

# ಹಸಿರು ಭೂಮಿ

## ಸಂಕಲ್ಪತರುವಿನ ಪಯಣದ ಕತೆ

**ಸಂಕಲ್ಪತರು ಫೌಂಡೇಶನ್**

**ಸಂಕಲ್ಪತರು ಪರಿಸರದೊಂದಿಗೆ ತಂತ್ರಜ್ಞಾನವನ್ನು ವಿನೂತನ ರೀತಿಯಲ್ಲಿ ಬೆಸೆದಿದೆ. ಗಿಡಗಳನ್ನು ನೆಡಲು ಸಮಯ ಮತ್ತು ಸ್ಥಳದ ಅಭಾವವಿರುವವರು ಇದರ ಮೂಲಕ ಪರಿಸರಕ್ಕೆ ತಮ್ಮ ಸೇವೆಯನ್ನು ಸಲ್ಲಿಸಬಹುದಾಗಿದೆ. ಇದರ ಮೂಲಕ ವ್ಯಕ್ತಿಗಳನ್ನು ಪರಿಸರದೊಂದಿಗೆ ಬೆಸೆಯುವುದರೊಂದಿಗೆ ಗ್ರಾಮೀಣ ಸಮುದಾಯಗಳ ಬದುಕು ಉತ್ತಮಗೊಳ್ಳಲು ಸಹಕಾರಿಯಾಗಿದೆ.**

ವಾತಾವರಣದಲ್ಲಿನ ಇಂಗಾಲದ ಪ್ರಮಾಣವನ್ನು ಕಡಿಮೆಮಾಡಲು ನಾಗರಿಕರನ್ನು ಪರಿಸರ ಸಂರಕ್ಷಣೆಯ ಕಡೆಗೆ ಕರೆದೊಯ್ಯಲು 2011ರಲ್ಲಿ ಸಂಕಲ್ಪತರು ಹುಟ್ಟಿಕೊಂಡಿತು. ಎಂಬಿಎ ಪದವೀಧರರಾದ ಶ್ರೀ ಅಪೂರ್ವ ಭಂಡಾರಿಯವರು ಹಲವು ವರ್ಷಗಳ ಕಾಲ ಐಟಿ ವಲಯದಲ್ಲಿ ಸೇವೆಸಲ್ಲಿಸಿದವರು. ಅವರು ತಮ್ಮ ಪರಿಸರ ಪ್ರೇಮ ಮತ್ತು ತಂತ್ರಜ್ಞಾನವನ್ನು ಬದುಕನ್ನು ಹಸನುಗೊಳಿಸಲು ಬಳಸಲು ಬಯಸಿದರು. ಅವರ ಯೋಜನೆಯ ಉದ್ದೇಶ ಮರಗಳನ್ನು ನೆಡುವ ಮೂಲಕ ಆರೋಗ್ಯಕರವಾದ ಸ್ವಚ್ಛವಾದ ಹಸಿರು ಪರಿಸರವನ್ನು ನಿರ್ಮಿಸುವುದು. ಇದರಿಂದ ಭೂಮಿಯ ಮೇಲಿನ ಜೀವ ಹಾಗೂ ಸಸ್ಯ ವೈವಿಧ್ಯತೆಯು ಹೆಚ್ಚುತ್ತದೆ. ಇದರಿಂದ ಗ್ರಾಮೀಣ ಸಮುದಾಯಗಳಿಗೆ ನೆರವಾಗುತ್ತದೆ.

ಸಂಕಲ್ಪತರು ವೆಬ್‌ಸೈಟ್ 2012ರಲ್ಲಿ ಆರಂಭವಾಯಿತು. 2013ರಲ್ಲಿ ಇದರ ಮೊಬೈಲ್ ಅಪ್ಲಿಕೇಶನ್ ಬಿಡುಗಡೆಯಾಯಿತು. 2014ರ ವೇಳೆಗೆ ಈ ಸಂಸ್ಥೆಯು 6 ಭಾರತೀಯ ರಾಜ್ಯಗಳಲ್ಲಿ ಕಾರ್ಯ–ನಿರ್ವಹಿಸುವಂತಾಯಿತು. ಇದರಲ್ಲಿ ಲೇಹ್ ಲಡಾಕ್ ಕೂಡ ಸೇರಿದೆ.

**ಮಹಾರಾಷ್ಟ್ರದ ರೈತನು ಸೀತಾಫಲ ಮತ್ತು ಸೀಬೆಕಾಯಿ ಮರಗಳನ್ನು ತನ್ನ ತೋಟದಲ್ಲಿ ಬೆಳೆಯುವ ಮೂಲಕ ಉತ್ತಮ ಆದಾಯವನ್ನು ಗಳಿಸುತ್ತಿದ್ದಾನೆ**



ಫೋಟೋ : ಸಂಕಲ್ಪತರು ಫೌಂಡೇಶನ್

ವಿವಿಧ ಸಂಸ್ಥೆಗಳು ಮತ್ತು ಕಾರ್ಪೊರೇಟ್ ಕಂಪನಿಗಳೊಂದಿಗೆ ಕೆಲಸ ಮಾಡುತ್ತಾ ಸಂಕಲ್ಪತರು ತನ್ನ ಹಸಿರುಹೆಜ್ಜೆಗಳನ್ನು ಸುಮಾರು 18 ರಾಜ್ಯಗಳಲ್ಲಿ ಪಡಿಮೂಡಿಸಿದೆ. ಅರ್ಧಮಿಲಿಯನ್ ಮರಗಳನ್ನು ಯಶಸ್ವಿಯಾಗಿ ನೆಡಲಾಗಿದೆ.

## ಗ್ರಾಮೀಣರ ಬದುಕಿಗೆ ನೆರವು

ಗ್ರಾಮೀಣ ಭಾಗದ ರೈತರಿಗೆ ಹಣ್ಣು ಮತ್ತು ಮೇವನ್ನು ನೀಡುವ ಮರಗಳನ್ನು ಬೆಳೆಸಲು ನೆರವು ನೀಡಲಾಗುತ್ತದೆ. ಇದರಿಂದ ಅವರ ಜೀವನಮಟ್ಟ ಸುಧಾರಿಸುತ್ತದೆ. ಈ ಮರಗಳು ಮಹಿಳೆಯರನ್ನು ಸಬಲರಾಗಿಸುವುದರೊಂದಿಗೆ ಅವರಿಗೆ ಸ್ವಾತಂತ್ರ್ಯವನ್ನು ನೀಡುತ್ತದೆ. ಆಯಾ ಪ್ರದೇಶಗಳ ಜೀವವೈವಿಧ್ಯತೆಯನ್ನು ಹೆಚ್ಚಿಸುವುದರೊಂದಿಗೆ ಬಡತನ ನಿರ್ಮೂಲನೆ ಮಾಡಲು ನೆರವಾಗುತ್ತದೆ. ಇದರೊಂದಿಗೆ ಬರಡುಭೂಮಿಯಲ್ಲಿ ಹಸಿರುವಲಯದ ಹೆಚ್ಚಳಕ್ಕೆ ಕಾರಣವಾಗುತ್ತದೆ. ಮರಗಳನ್ನು ನೆಡಲು ಇಂತಹ ಬಂಜರುಭೂಮಿಗಳನ್ನೇ ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಇದರ ಮುಖ್ಯ ಉದ್ದೇಶ ಇಂತಹ ಕಡೆಯಲ್ಲಿ ಹಸಿರು ಪರಿಸರ ಸೃಷ್ಟಿ ಮತ್ತು ಹಣ್ಣಿನ ಮರಗಳನ್ನು ಬೆಳೆಯಲು ರೈತರಿಗೆ ನೆರವು ನೀಡಿ ಅವರ ಜೀವನಮಟ್ಟವನ್ನು ಉತ್ತಮಗೊಳಿಸುವುದು.

2015ರಲ್ಲಿ ಭಾರತ ಸರ್ಕಾರದ ಥಾರ್ ಮರಭೂಮಿಯಲ್ಲಿ ಗಿಡನೆಡುವ ಕಾರ್ಯಕ್ರಮದ ಸಹಭಾಗಿತ್ವದಲ್ಲಿ ಸಂಕಲ್ಪತರು ಫೌಂಡೇಶನ್ ಬರ್ಮೆರ್ ಮತ್ತು ಜೈಸ್ಲಮೇರ್ ಜಿಲ್ಲೆಗಳಲ್ಲಿ ಕೆಲಸ ಮಾಡಲು ಆರಂಭಿಸಿತು. ಈ ಕಾರ್ಯಕ್ರಮದ ಉದ್ದೇಶ ಬಡರೈತರಿಗೆ ದಾಳಿಂಬೆ, ನಿಂಬೆ ಮೊದಲಾದ ಗಿಡಗಳನ್ನು ಬೆಳೆದು ತಮ್ಮ ಜೀವನಮಟ್ಟವನ್ನು ಸುಧಾರಿಸಿಕೊಳ್ಳಲು ನೆರವುನೀಡುವುದು. ಈ ಕ್ರಮದಿಂದಾಗಿ ಈ ವಲಯದಲ್ಲಿ ಹಸಿರು ಪರಿಸರ ನಿರ್ಮಾಣವಾಗುವುದರೊಂದಿಗೆ ಬಡರೈತರ ಬದುಕು ಸುಧಾರಿಸಿತು. ಗ್ರೀನ್‌ಲ್ಯಾಮ್ ಲ್ಯಾಮಿನೇಟ್ಸ್ ಅವರ ಸಹಯೋಗದೊಂದಿಗೆ ರಾಜಸ್ಥಾನದ ಥಾಕಾ ಜಿಲ್ಲೆಯ 5 ರೈತರ ತೋಟಗಳಲ್ಲಿ 5,002 ದಾಳಿಂಬೆ ಸಸಿಗಳನ್ನು ನೆಡಲಾಯಿತು. ಇದರೊಂದಿಗೆ ಆ ಪ್ರದೇಶದ ಸಮುದಾಯಕ್ಕೆ ಸೇರಿದ ಭೂಪ್ರದೇಶಗಳಲ್ಲಿ ಮತ್ತು ಶಾಲೆಗಳಲ್ಲೂ ಸಸಿಗಳನ್ನು ನೆಡಲಾಯಿತು.

ಸಂಜೀವಿನಿ ಎನ್ನುವ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆಯಡಿಯಲ್ಲಿ ಲೇಹ್ ಲಡಾಕ್ ಮತ್ತು ರಾಜಸ್ಥಾನದ ಥಾರ್ ಮರುಭೂಮಿಯಲ್ಲಿ ಸುಮಾರು 16,000 ಹಣ್ಣಿನ ಮರಗಳು, ನೆರಳು ನೀಡುವ ಮರಗಳು ಮತ್ತು ಮೇವನ್ನು ನೀಡಬಲ್ಲ ಮರಗಳನ್ನು ಸಮುದಾಯಕ್ಕೆ ಸೇರಿದ ಭೂಮಿಗಳಲ್ಲಿ, ಹಲವಾರು ರೈತರ ಜಮೀನುಗಳಲ್ಲಿ ನೆಡಲಾಯಿತು. "ಹಳ್ಳಿಗರ ಕಾಡು ಹಳ್ಳಿಗಾಗಿ'' ಎನ್ನುವ ಘೋಷಣೆಯೊಂದಿಗೆ ಸಮುದಾಯದ ಸದಸ್ಯರು ಆ ಮರಗಳ ಪೋಷಣೆ ಮಾಡಿದರು. ಈ ಯೋಜನೆಯು ಸ್ಥಳೀಯರ ಬದುಕನ್ನು ಸುಧಾರಿಸಿ ಮಹಿಳೆಯರ ಸಬಲೀಕರಣಕ್ಕೆ ನೆರವು ನೀಡಿತು. ದಕ್ಷಿಣದಲ್ಲಿ ಫೌಂಡೇಶನ್ ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ತಲುಪುಲ ಹಳ್ಳಿಯಲ್ಲಿ ಕೆಲಸ ಮಾಡಿತು. ಈ ಭಾಗದ ಜನರು ತೀವ್ರ ಬರ ಮತ್ತು

**ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ತಲುಪುಲದಲ್ಲಿ 50,000ಕ್ಕೂ ಹೆಚ್ಚು ಮರಗಳನ್ನು ಇಲ್ಲಿನ ರೈತರ ಕುಟುಂಬಗಳಿಗೆ ಸುಸ್ಥಿರ ಆದಾಯ ಒದಗಿಸಲು ನೆಡಲಾಯಿತು.**

ಬೆಳೆ ಬೆಳೆಯಲು ಪ್ರತಿಕೂಲ ಹವಾಮಾನ ಪರಿಸ್ಥಿತಿಗಳನ್ನು ಎದುರಿಸುತ್ತಿದ್ದರು. ಈ ಭಾಗದಲ್ಲಿ ಬೆಳೆ ನಷ್ಟ ಮತ್ತು ಸೂಕ್ತ ಮಾರುಕಟ್ಟೆ ದರಗಳು ದೊರಕದೆ ರೈತರ ಆತ್ಮಹತ್ಯೆಗಳು ಹೆಚ್ಚು. ಅರಣ್ಯಕೃಷಿಯ ಮೂಲಕ ಇಲ್ಲಿ 50000 ಮರಗಳನ್ನು ನೆಡಲಾಯಿತು. ಇದು ಹಳ್ಳಿಗರ ಬದುಕು ಮತ್ತು ಆದಾಯಕ್ಕೊಂದು ಸುಸ್ಥಿರತೆಯನ್ನು ತಂದುಕೊಟ್ಟಿತು. ಅದೇ ರೀತಿ ಮಹಾರಾಷ್ಟ್ರದ ಸತಾರ ಮತ್ತು ಬುಲಧಾನ ಜಿಲ್ಲೆಗಳಲ್ಲಿ 12,500 ಮರಗಳನ್ನು ಆಯ್ದ ರೈತರ ಜಮೀನುಗಳಲ್ಲಿ ನೆಡಲಾಯಿತು.

## ನಗರ ಪ್ರದೇಶದಲ್ಲಿ ಹಸಿರು ಪರಿಸರ

ವಸತಿ ಪ್ರದೇಶಗಳಲ್ಲಿ ಮತ್ತು ಶಾಲೆಗಳಲ್ಲಿ ವಾಯುಮಾಲಿನ್ಯವನ್ನು ತಗ್ಗಿಸಲು ಹಸಿರನ್ನು ಹೆಚ್ಚಿಸುವ ಸಲುವಾಗಿ ಮರಗಳನ್ನು ನೆಡಲಾಯಿತು. ಈ ಗಿಡನೆಡುವ ಕಾರ್ಯಕ್ರಮದ ಮುಖ್ಯ ಉದ್ದೇಶ ದೇಶದ ನಗರಗಳಲ್ಲಿ ಹೆಚ್ಚುತ್ತಿರುವ ವಾಯುಮಾಲಿನ್ಯವನ್ನು ತಗ್ಗಿಸುವುದು. ಇದಕ್ಕಾಗಿಯೇ ವಸತಿಪ್ರದೇಶಗಳಲ್ಲಿ 25,000 ಮರಗಳನ್ನು ನೆಡಲಾಯಿತು. ಈ ಕಾರ್ಯಕ್ರಮವು ನಗರದ ಜನತೆಯಲ್ಲಿ ಪರಿಸರ ಸಂರಕ್ಷಣೆಯ ಅರಿವು ಮೂಡಿಸಿ ಗಿಡಗಳ ಕಾಳಜಿ ವಹಿಸುವಂತೆ ಮಾಡಿತು. ಈ ಪ್ರಯತ್ನವು ಯಶಸ್ವಿಯಾಗಿ ಆ ನಗರಗಳಲ್ಲಿನ ಇಂಗಾಲದ ಪ್ರಮಾಣವನ್ನು ತಗ್ಗಿಸಿ ಹಸಿರನ್ನು ಹೆಚ್ಚಿಸಿತು.

ಪರಿಸರದ ಸುಸ್ಥಿರ ಅಭಿವೃದ್ಧಿಯ ಕುರಿತು ಕಾಳಜಿ ಹೊಂದಿರುವ ಎನ್‌ಇಸಿ ಟೆಕ್ನಾಲಜೀಸ್‌ನವರು ಸಂಕಲ್ಪತರುವಿನೊಂದಿಗೆ ಕೂಡಿ

**ಹರಿಯಾಣದ ಪಂಚಗಾಂವ್‌ನ ಸಂಕಲ್ಪತರು ಫೌಂಡೇಶನ್ನಿನಲ್ಲಿ ಶಾಲಾ ವಿದ್ಯಾರ್ಥಿಗಳು ಸ್ವಚ್ಛ ಮತ್ತು ಹಸಿರು ಶಾಲೆ ಕಾರ್ಯಕ್ರಮದಡಿ ಗಿಡಗಳನ್ನು ನೆಟ್ಟರು**



ಫೋಟೋ : ಸಂಕಲ್ಪತರು ಫೌಂಡೇಶನ್

ಭೂಮಿಯನ್ನು ಸಂರಕ್ಷಿಸಿ ಎನ್ನುವ ಯೋಜನೆಯನ್ನು ಕೈಗೆತ್ತಿಕೊಂಡರು. ಇದರ ಉದ್ದೇಶ ಭೂಮಿಯನ್ನು ಹಸಿರಾಗಿ ಸ್ವಚ್ಛವಾಗಿಡುವುದು. ಇದರ ಅಂಗವಾಗಿ ಬೆಂಗಳೂರಿನ ನಿರಾಶ್ರಿತರ ಪರಿಹಾರ ಕೇಂದ್ರದಲ್ಲಿ 600 ಹಣ್ಣಿನ ಮರಗಳನ್ನು ನೆಟ್ಟರು. ಈ ಕೇಂದ್ರದಲ್ಲಿರುವವರಿಗೆ ಇದೊಂದು ಪ್ರೋತ್ಸಾಹಯದಾಯಕ ಮಾದರಿಯಾಯಿತು. ಉದ್ಯಾನ ನಗರಿಯ ಪರಿಸರಕ್ಕೆ ಕೊಡುಗೆ ನೀಡಿತು.

ಪುಣೆಯ ವಸತಿ ಪ್ರದೇಶದಲ್ಲಿ 85 ದೇಸಿ ತಳಿಗಳ ಮರಗಳನ್ನು ನೆಡಲಾಯಿತು. ಉತ್ಸಾಹಿ ನಿವಾಸಿಗಳು ಮಕ್ಕಳು, ಮಹಿಳೆಯರಾದಿಯಾಗಿ ಎಲ್ಲರೂ ಗಿಡ ನೆಡುವ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ತಾವು ನೆಟ್ಟ ಗಿಡಗಳನ್ನು ಕಾಳಜಿ ವಹಿಸಿ ಬೆಳೆಸಿದರು.

## ಮಕ್ಕಳಿಗೆ ಶಿಕ್ಷಣ

ಸ್ವಚ್ಛ ಮತ್ತು ಹಸಿರು ಶಾಲಾ ಯೋಜನೆಯ ಉದ್ದೇಶ ಮಕ್ಕಳಲ್ಲಿ ಪರಿಸರ ಪ್ರಜ್ಞೆಯನ್ನು ಬೆಳೆಸಿ ಅವರನ್ನು ಜವಾಬ್ದಾರಿಯುತ ನಾಗರಿಕರನ್ನಾಗಿ ಮಾಡುವುದು. ಕಾರ್ಯಾಗಾರಗಳು, ಶೈಕ್ಷಣಿಕ ಚಿತ್ರಗಳ ಪ್ರದರ್ಶನ ಮೊದಲಾದ ಚಟುವಟಿಕೆಗಳಲ್ಲಿ ಮಕ್ಕಳು ಮತ್ತು ಶಿಕ್ಷಕರು ಪಾಲ್ಗೊಂಡರು. ಅವರಿಗೆ ಪರಿಸರವ್ಯವಸ್ಥೆಯನ್ನು ಉಳಿಸಿಕೊಳ್ಳಲು ಪ್ರಾಯೋಗಿಕ ತರಬೇತಿಯನ್ನು ನೀಡಲಾಯಿತು.
ಟೆಕ್ ಇಂಡಿಯಾದ ಸಹಯೋಗದೊಂದಿಗೆ ರಾಷ್ಟ್ರೀಯ ರಾಜಧಾನಿ ಪ್ರದೇಶಗಳ ಮುನಿಸಿಪಲ್ ಕಾರ್ಪೊರೇಷನ್ ಶಾಲೆಗಳಲ್ಲಿ ಸಮಗ್ರ ಪರಿಸರ ಶಿಕ್ಷಣ ಕಾರ್ಯಕ್ರಮವನ್ನು ಪರಿಚಯಿಸಲಾಯಿತು. ಟಾಟಾ ಪವರ್‌ನವರ ನೆರವಿನೊಂದಿಗೆ 8 ರಾಜ್ಯಗಳಲ್ಲಿನ ವಿವಿಧ ಶಾಲೆಗಳಲ್ಲಿ 5,000 ಮರಗಳನ್ನು ನೆಡಲಾಯಿತು. ಇದರಲ್ಲಿ 6,000 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ತಾವು ನೆಟ್ಟ ಸಸಿಗಳನ್ನು ಬೆಳೆಸುವ ವಿಧಾನಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಡುವುದರೊಂದಿಗೆ ತಮ್ಮ ಶಾಲೆಯ ಆವರಣವನ್ನು ಸ್ವಚ್ಛವಾಗಿ ಹಸಿರಾಗಿ ಇಟ್ಟುಕೊಳ್ಳುವ ಶಿಕ್ಷಣ ನೀಡಲಾಯಿತು.

ಸಂಕಲ್ಪತರು ಫೌಂಡೇಶನ್ ಮತ್ತು ಕೈರ್ನ್ ಇಂಡಿಯಾದೊಂದಿಗೆ ಬರ್ಮರ್‌ನ ರಾಜ್ಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾರ್ಯಾಗಾರವನ್ನು ಏರ್ಪಡಿಸಿತು. ಅವರ ಸ್ವಚ್ಛ ಮತ್ತು ಹಸಿರು ಶಾಲಾ ಕಾರ್ಯಕ್ರಮದಡಿ ವಿದ್ಯಾರ್ಥಿಗಳಿಗೆ ನೀರು ಕೊಯ್ಲಿನ ಬಗ್ಗೆ ಶಿಕ್ಷಣ ನೀಡಲಾಯಿತು. ಇದರಲ್ಲಿ ಮಕ್ಕಳು ಉತ್ಸಾಹದಿಂದ ಪಾಲ್ಗೊಂಡು ಪರಿಸರ ಸಂರಕ್ಷಣೆಯ ತಂತ್ರಗಳನ್ನು ಕಲಿತರು.

## ಸಮುದಾಯದ ಭೂಮಿಯ ಪುನಶ್ಚೇತನ

ಸಮುದಾಯಕ್ಕೆ ಸೇರಿದ ಬಂಜರು ಭೂಮಿಯನ್ನು ಹಸಿರಾಗಿಸಲು ಗಿಡಗಳನ್ನು ನೆಡಲಾಯಿತು. ಸಮುದಾಯದ ಸದಸ್ಯರು ಮರಗಳನ್ನು ಬೆಳೆಸಿ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸುವಂತೆ ಮಾಡಲಾಯಿತು.

ದೆಹಲಿಯ ಎನ್‌ಸಿಆರ್ ವಲಯದ ಅರವಳ್ಳಿ ಕಾಂಕ್ರೀಟ್ ಕಾಡಾಗಿದ್ದು ಅಲ್ಲಿನ ಹಸಿರು ವಲಯವನ್ನು ನಾಶಗೊಳಿಸಿ ಬಂಜರು ಭೂಮಿಯಾಗಿಸಲಾಗಿದೆ. ರಿಯೊ ಟಿನ್ಟೊ ಮತ್ತು ಸಂಕಲ್ಪತರು ಒಟ್ಟಾಗಿ ಭವನಂ ಎನ್ನುವ ಯೋಜನೆಯನ್ನು ಕೈಗೆತ್ತಿಕೊಂಡು ಈ ಪ್ರದೇಶದ ಹಸಿರನ್ನು ಪುನಶ್ಚೇತನಗೊಳಿಸಲಾಯಿತು. ಅರವಳ್ಳಿ ಶ್ರೇಣಿಯಲ್ಲಿ ಎರಡು ಸಾವಿರ ದೇಸಿ ತಳಿಗಳನ್ನು ನೆಡಲಾಯಿತು. ಆ ಮೂಲಕ ದೆಹಲಿಯ ಸುತ್ತಮುತ್ತಲ ರಾಷ್ಟ್ರೀಯ ರಾಜಧಾನಿಯ ಪ್ರದೇಶಗಳ ನೈಸರ್ಗಿಕ ಪರಿಸರವನ್ನು ಬಲಗೊಳಿಸಲಾಯಿತು.

2016ರಲ್ಲಿ ಉತ್ತರಾಖಾಂಡದಲ್ಲಿ ಸಂಭವಿಸಿದ ಕಾಳ್ಗಿಚ್ಚಿನಲ್ಲಿ ಆದ ನಷ್ಟಕ್ಕೆ ಪರಿಹಾರವಾಗಿ ದೇಸಿತಳಿಗಳ ಮರಗಳನ್ನು ನೆಡಲಾಯಿತು. ಈ

### ಚೌಕ : ಹಸಿರು ಲೇಹ್ ಲಡಾಕ್ ಯೋಜನೆ

ಹಿಮಾಚ್ಛಾದಿತವಾದ ಲೇಹ್ ಲಡಾಕ್‌ನ ಪರ್ವತಗಳು 3500 ಮೀಟರ್ ಎತ್ತರದಲ್ಲಿದೆ. ಅವುಗಳ ಸೌಂದರ್ಯ ಅದ್ಭುತವಾದದ್ದೇ ಆದರೆ ಅಲ್ಲಿ ಹಸಿರಿನ ಕೊರತೆಯಿದೆ. ಈ ಬಂಜರು ಭೂಮಿಯಲ್ಲಿ ಹಣ್ಣಿನ ಮರಗಳನ್ನು ಬೆಳೆಸಿ ಅಂತರ್ಜಲ ಮಟ್ಟವನ್ನು ಪುನಶ್ಚೇತನಗೊಳಿಸಲು ಸಂಕಲ್ಪತರು ಫೌಂಡೇಶನ್‌ನವರು 2014ರಲ್ಲಿ 'ಹಸಿರು ಲೇಹ್ ಲಡಾಕ್ ಯೋಜನೆ'ಯನ್ನು ಹಮ್ಮಿಕೊಂಡರು. ಈ ತಂಡವು ಅಕ್ಟೋಬರ್ ಮತ್ತು ನವಂಬರ್ ತಿಂಗಳುಗಳಲ್ಲಿ ಸಸಿಗಳನ್ನು ಅಲ್ಲಿಗೆ ಸಾಗಿಸಿ ಹಿಮಪಾತದಿಂದ ಅದನ್ನು ರಕ್ಷಿಸಲು ಬಂಕರ್‌ಗಳಲ್ಲಿಟ್ಟಿರುತ್ತಾರೆ. ಹಿಮಪಾತವು ನಿಂತಮೇಲೆ ಇವುಗಳನ್ನು ಏಪ್ರಿಲ್ ತಿಂಗಳಲ್ಲಿ ಸ್ಥಳೀಯರ ನೆರವಿನಿಂದ ನೆಡಲಾಗುತ್ತದೆ.

ಇದನ್ನು ಎರಡು ರೀತಿಯಲ್ಲಿ ಮಾಡಲಾಗುತ್ತದೆ: ಗ್ರಾಮೀಣ ಜೀವನೋಪಾಯ ನೆರವು ಯೋಜನೆಯಡಿ ರೈತರ ಜಮೀನುಗಳಲ್ಲಿ ಸೇಬು ಮತ್ತು ಏಪ್ರಿಕಾಟ್ ಹಣ್ಣಿನ ಮರಗಳನ್ನು ನೆಡಲಾಗುತ್ತದೆ. ಸಮುದಾಯ ಗಿಡ ನೆಡುವಿಕೆಯಡಿ ಮೇವನ್ನು ಒದಗಿಸುವ ಮರಗಳನ್ನು ಖಾಲಿಯಿರುವ ಸಮುದಾಯ ಭೂಮಿಗಳಲ್ಲಿ ನೆಡಲಾಗುತ್ತದೆ. ಪ್ರತಿಕೂಲ ಹವಾಮಾನ ಪರಿಸ್ಥಿತಿಯಲ್ಲೂ ಎನ್‌ಜಿಒಗಳ ಪ್ರಯತ್ನದಿಂದ 95% ಮರಗಳು ಬದುಕುಳಿದಿವೆ. ಇಲ್ಲಿ ಗಿಡಗಳನ್ನು ನೆಡುವುದು ಮತ್ತು ಕಾಪಾಡಿಕೊಳ್ಳುವುದು ಎರಡೂ ಸವಾಲಿನ ಕೆಲಸ. ಸಂಕಲ್ಪತರು ಇಲ್ಲಿನ 800 ರೈತರನ್ನು ಮತ್ತು 50 ಶಾಲೆಗಳ ನೆರವಿನೊಂದಿಗೆ ಇಲ್ಲಿ ಸುಸ್ಥಿರ ಮತ್ತು ಜೈವಿಕವೈವಿಧ್ಯ ಪರಿಸರವನ್ನು ಸೃಷ್ಟಿಸಿದೆ. ಈ ಹಿಮಾಚ್ಛಾದಿತ ಬಂಜರು ಪ್ರದೇಶವಾದ ಲೇಹ್ ಲಡಾಕಿನಲ್ಲಿ ಸಾವಿರಾರು ಹಸಿರು ಮರಗಳನ್ನು ಬೆಳೆಸಿದ್ದಾರೆ. ಇಲ್ಲಿ ಬೆಳೆಯಲಾದ ಹಣ್ಣುಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುತ್ತದೆ. ಇದು ರೈತರಿಗೊಂದು ಆದಾಯಮೂಲವಾಗಿದೆ. ಈ ಹಣ್ಣುಗಳು ಅವರ ಪೌಷ್ಟಿಕಾಂಶ ಅಗತ್ಯವನ್ನು ಪೂರೈಸುವುದರೊಂದಿಗೆ ಹಣ್ಣಿನ ಮರಗಳು ಮಣ್ಣಿನ ಸವಕಳಿಯನ್ನು ತಡೆಯುತ್ತದೆ.

ಲೇಹ್‌ಲಡಾಕ್‌ನ 12 ಹಳ್ಳಿಗಳು ಮತ್ತು ಇಂಡಿಯಾ ಚೀನಾದ ಗಡಿಯಾದ ನ್ಯೋಮಾ ಹಳ್ಳಿಯಲ್ಲಿ ಸುಮಾರು 30,000 ಮರಗಳನ್ನು ನೆಡಲಾಗಿದೆ. ಈ ಎತ್ತರದ ಪ್ರದೇಶದಲ್ಲಿ ಆಮ್ಲಜನಕದ ಪೂರೈಕೆಗಾಗಿ ಒಂದು ಸಾವಿರ ಜನಪ್ರಿಯ ಮತ್ತು ಆಯ್ದ ಸಸಿಗಳನ್ನು ಭಾರತೀಯ ಸೇನೆಯೊಂದಿಗೆ ನೆಡಲಾಯಿತು. ಸಂಕಲ್ಪತರು ಪ್ರವಾಹ ಪೀಡಿತ ಹಳ್ಳಿಗಳಾದ ಟಿಯಾ ಮತ್ತು ವನ್ಲಾಗಳಲ್ಲಿಯೂ ಸಸಿಗಳನ್ನು ನೆಟ್ಟಿದೆ.

ಕಾರ್ಯಕ್ರಮವನ್ನು ಸ್ಥಳೀಯರ ಅಗತ್ಯಗಳ ಪೂರೈಕೆಗೆ ತಕ್ಕಂತೆ ಹಾಗೂ ಜೀವವೈವಿಧ್ಯತೆಯನ್ನು ಹೆಚ್ಚಿಸಲು ಅನುವಾಗುವಂತೆ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮ ಆರಂಭವಾದಾಗಿನಿಂದ ಇಲ್ಲಿಯವರೆಗೆ ಹಿಮಾಲಯ ಪ್ರದೇಶದ ನೈಸರ್ಗಿಕ ಪರಿಸರವು ಪುನಶ್ಚೇತನಗೊಂಡಿದ್ದು ಸ್ಥಳೀಯರಲ್ಲಿ ಕಾಳ್ಗಿಚ್ಚನ್ನು ತಡೆಯುವ ಕ್ರಮಗಳ ಕುರಿತು ಅರಿವು ಮೂಡಿದೆ.

### ಕ್ರಮಿಸಬೇಕಾದ ಹಾದಿ

ಪ್ರಸ್ತುತದಲ್ಲಿ ಸಂಕಲ್ಪತರು ಇತ್ತೀಚಿನ ತಂತ್ರಜ್ಞಾನವನ್ನು ಬಳಸಿ ಭೂಮಿಗೆ ಸೇವೆ ಸಲ್ಲಿಸುವ ಹಾದಿಯಲ್ಲಿ ನಿಂತಿದೆ. ಬೀಜಯಾನ 1 ಎನ್ನುವುದು ಟೆಹರಿಯಂತಹ ಕಠಿಣ ಪ್ರದೇಶಗಳಲ್ಲಿ ಬೀಜ ಬಾಂಬ್ ಎನ್ನುವ ವಿಧಾನದ ಮೂಲಕ ಸಸಿಗಳನ್ನು ನೆಡುವ ಪ್ರಯತ್ನವನ್ನು ಆರಂಭಿಸಿತು. ಪರಿಸರ ಜಾಗೃತಿ ಮತ್ತು ಹಸಿರು ವಲಯ ಹೆಚ್ಚಳದ ಉದ್ದೇಶದಿಂದ ಉದ್ಯೋಗಿಗಳನ್ನು ಇದರಲ್ಲಿ ಭಾಗಿಯಾಗಿಸಿಕೊಳ್ಳುವ ಕಾರ್ಯಕ್ರಮವನ್ನು ನಗರ ಪ್ರದೇಶಗಳಲ್ಲಿ ಆರಂಭಿಸಲಾಯಿತು. ಇದರ ಉದ್ದೇಶ ಕಾರ್ಪೊರೇಟ್ ಉದ್ಯೋಗಿಗಳಿಗೆ ಮರದ ಮಹತ್ವವನ್ನು ತಿಳಿಸಿಕೊಟ್ಟು ಇಂಗಾಲದ ಪ್ರಮಾಣವನ್ನು ಕಡಿಮೆಮಾಡಲು ಪರಿಸರಕ್ಕೆ ಅವರು ಕೊಡುಗೆ ನೀಡುವಂತೆ ಮಾಡುವುದು.

ಕಳೆದ ಏಳು ವರ್ಷಗಳಲ್ಲಿ ಹಲವು ಸವಾಲುಗಳ ನಡುವೆಯೂ ಮಿಲಿಯನ್ ಮರಗಳನ್ನು ನೆಡುವ ತನ್ನ ಗುರಿಯತ್ತ ಸಾಗುತ್ತಿದೆ. ಆರಂಭದಲ್ಲಿ ಬೀಜಗಳ ಸಂಗ್ರಹಣೆಗೆ ನಿಧಿ ಹೊಂದಿಸುವುದೇ ದೊಡ್ಡ ಸವಾಲಾಗಿತ್ತು. ಲಾಭ ಗಳಿಸುವಂತಹ ಯೋಜನೆಗಳಿಗೆ ಬಂಡವಾಳ ಸಿಗುವಷ್ಟು ಸುಲಭವಾಗಿ ಈ ರೀತಿಯ ಲಾಭ ರಹಿತ ಯೋಜನೆಗಳಿಗೆ ಬಂಡವಾಳ ಹೊಂದಿಸಲಾಗುವುದಿಲ್ಲ.

ಮತ್ತೊಂದು ಬಹುಮುಖ್ಯ ಸವಾಲೆಂದರೆ ಭಾರತದಂತಹ ವೈವಿಧ್ಯಮಯ ಭೌಗೋಳಿಕ, ಸಾಂಸ್ಕೃತಿಕ ಮತ್ತು ಬಹುಭಾಷೆ ಇರುವ ದೇಶದಲ್ಲಿ ಸಂಪರ್ಕವನ್ನು ಸಾಧಿಸುವುದು. ಒಳಭಾಗಗಳಲ್ಲಿರುವ ಹಳ್ಳಿಗಳಿಗೆ ಈ ಕಾರ್ಯಕ್ರಮಗಳನ್ನು ತಲುಪಿಸುವುದು ಕೂಡ ಸವಾಲಿನ ಕೆಲಸವಾಗಿದೆ. ಏಕೆಂದರೆ ಪ್ರತಿಯೊಂದು ರಾಜ್ಯದ ಭಾಷೆ ಬೇರೆಯಾಗಿದ್ದು ಅಲ್ಲಿನ ರೈತರಿಗೆ ಅವರದೇ ಭಾಷೆಯಲ್ಲಿ ಈ ಕಾರ್ಯಕ್ರಮಗಳನ್ನು ವಿವರಿಸಿ ಅವರನ್ನು ಇದರಲ್ಲಿ ಭಾಗಿಯಾಗುವಂತೆ ಮಾಡುವುದು ಕಠಿಣವಾದ ಕೆಲಸ.

ವಿವಿಧೆಡೆಗಳಲ್ಲಿ ನೆಡಲಾಗಿರುವ ಮರಗಳಲ್ಲಿ 95%ನಷ್ಟು ಮರಗಳು ಆರೋಗ್ಯಕರವಾಗಿ ಬೆಳೆಯುತ್ತಿದ್ದು ಹಸಿರನ್ನು ಪಸರಿಸುತ್ತಿದೆ. ಈ ಕಾರ್ಯಕ್ರಮಗಳು ಗ್ರಾಮೀಣ ಭಾಗದಲ್ಲಿ ಹಸಿರನ್ನು ಹೆಚ್ಚಿಸುವುದರೊಂದಿಗೆ ಬದುಕಿನ ಮಟ್ಟವನ್ನು ಉತ್ತಮಗೊಳಿಸಿದೆ. ನಗರ ಪ್ರದೇಶಗಳಲ್ಲೂ ಇದರಿಂದಾಗಿ ಹಸಿರು ಹೆಚ್ಚಿದೆ. ಭವಿಷ್ಯದಲ್ಲಿ ಈ ಮರಗಳು ದೊಡ್ಡದಾಗಿ ವಾತಾವರಣದಲ್ಲಿನ ಮಾಲಿನ್ಯವನ್ನು ತಗ್ಗಿಸುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಈ ಕಾರ್ಯಕ್ರಮವು ಸಮುದಾಯದ ನಡುವೆ ಪರಿಸರ ಜಾಗೃತಿಯನ್ನು ಮೂಡಿಸಿದೆ. ತಂತ್ರಜ್ಞಾನವನ್ನು ಪರಿಸರದೊಂದಿಗೆ ಒಗ್ಗೂಡಿಸುವ ಮೂಲಕ ಸಂಕಲ್ಪತರು ಸಮಯ ಮತ್ತು ಸ್ಥಳದ ಅಭಾವವಿರುವವರು ಕೂಡ ಪರಿಸರಕ್ಕೆ ತಮ್ಮ ಕೊಡುಗೆಯನ್ನು ನೀಡಲು ಅವಕಾಶ ಕಲ್ಪಿಸಿದೆ. ಈ ಕಾರ್ಯಕ್ರಮಗಳ ಮೂಲಕ ವ್ಯಕ್ತಿ ಮತ್ತು ಪರಿಸರ ಸಂಪರ್ಕವನ್ನು ಯಶಸ್ವಿಯಾಗಿ ಸಾಧಿಸಲಾಗಿದೆ. ಜೊತೆಗೆ ಗ್ರಾಮೀಣ ಭಾಗದ ಜೀವನಮಟ್ಟವನ್ನು ಸುಧಾರಿಸಿದೆ.

◆

**SankalpTaru Foundation**
Plot No. 12, Dhoran Khas, Kishanpur,
Near St. Xavier's School, Canal Road,
Dehradun, Uttarakhand - 248001.
www.sankalptaru.org
E-mail: wishy@sankalptaru.org

**ಆಂಗ್ಲ ಮೂಲ :**
ಲೀಸಾ ಇಂಡಿಯಾ, ಸಂಪುಟ 21, ಸಂಚಿಕೆ 4, ಡಿಸೆಂಬರ್ 2019.

# ಸಂಪನ್ಮೂಲಗಳ ಪರಿಣಾಮಕಾರಿ ಮರುಬಳಕೆ

## ಅಭಿವೃದ್ಧಿಯ ಉತ್ತಮ ಮಾದರಿ

**ಅನಿತ ಕುಮಾರಿ ಪಿ ಮತ್ತು ಇಂದುಜಾ ಎಸ್**

**ಸಾವಯವ ಕೃಷಿ ತ್ಯಾಜ್ಯಗಳ ವ್ಯವಸ್ಥಿತ ಮರುಬಳಕೆ ಮತ್ತು ಮೌಲ್ಯವರ್ಧನೆಯು ತೋಟದ ಉತ್ಪಾದನೆಯನ್ನು ಹೆಚ್ಚಿಸುವುದರೊಂದಿಗೆ ಸ್ವಾವಲಂಬನೆಯನ್ನು ಹೆಚ್ಚಿಸುತ್ತದೆ. ಸಂಪನ್ಮೂಲಗಳ ಮರುಬಳಕೆ ಮಾಡುವ ಮೂಲಕ ರೈತರು ಪರಿಸರ ಸೇವೆಯನ್ನು ಮಾಡಿದಂತಾಗುತ್ತದೆ. ಸಂಪನ್ಮೂಲಗಳ ಮರುಬಳಕೆಯು ಹವಾಮಾನ ತಾಳಿಕೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಅದರಲ್ಲೂ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಇದು ವರದಾನವಾಗಿದೆ.**

ಸಾಂಪ್ರದಾಯಿಕವಾಗಿ ರೈತರು ಸಂಪನ್ಮೂಲಗಳ ಮರುಬಳಕೆಯನ್ನು ಮಾಡುತ್ತಲಿದ್ದಾರೆ. ಅದರಲ್ಲೂ ಮಹಿಳಾ ಕೃಷಿಕರು ಕೃಷಿ ಸಂಪನ್ಮೂಲಗಳ ಮರುಬಳಕೆಯನ್ನು ಹೆಚ್ಚು ಸಮರ್ಪಕವಾಗಿ ಮತ್ತು ಸೃಜನಾತ್ಮಕವಾಗಿ ಮಾಡುತ್ತಾರೆ. ಅವರು ಕೃಷಿತ್ಯಾಜ್ಯವನ್ನು ಉರುವಲಾಗಿ ಬಳಸುತ್ತಾರೆ. ಸಗಣಿಯನ್ನು ಉರುವಲಾಗಿ ಇಲ್ಲವೇ ತೋಟಕ್ಕೆ ಪೌಷ್ಟಿಕಾಂಶ ನೀಡಿಕೆಗಾಗಿ ಬಳಸುತ್ತಾರೆ. ತಿನ್ನಬಹುದಾದ ಅಡುಗೆ ತ್ಯಾಜ್ಯವನ್ನು ನಾಯಿಗಳಿಗೆ, ದನಗಳಿಗೆ ನೀಡುತ್ತಾರೆ. ಇನ್ನುಳಿದ ಅಡುಗೆತ್ಯಾಜ್ಯವನ್ನು ಗೊಬ್ಬರದ ಗುಂಡಿಗೆ ಇಲ್ಲವೆ ತೆಂಗಿನ ಮರದ ಗುಣಿಗೆ ಹಾಕುತ್ತಾರೆ. ಕುಟುಂಬದವರು ಸಂಪೂರ್ಣವಾಗಿ ಆಹಾರ ಮತ್ತಿತರ ಅವಶ್ಯಕತೆಗಾಗಿ ತಮ್ಮ ತೋಟವನ್ನೇ ಅವಲಂಭಿಸಿದಾಗ ಅಂತಹ ಕಡೆ ತ್ಯಾಜ್ಯ ಉತ್ಪಾದನೆ ಶೂನ್ಯವಾಗಿ ಇರುವುದೆಲ್ಲವೂ ಮರುಬಳಕೆಯಾಗುತ್ತದೆ. ಈ ರೀತಿಯ ತೋಟದ ವ್ಯವಸ್ಥೆಯು ತಲೆತಲೆಮಾರುಗಳಿಂದಲೂ ನಡೆದುಕೊಂಡು ಬಂದಿದೆ.

ಸಣ್ಣ ಕುಟುಂಬಗಳ ತೋಟಗಳು ಸಂಪನ್ಮೂಲಗಳ ಮರುಬಳಕೆಯನ್ನು ಗರಿಷ್ಠ ಮಟ್ಟದಲ್ಲಿ ಮಾಡಿಕೊಳ್ಳುವಂತೆ ಸಾಧ್ಯವಾಗುವಂತೆ ರೂಪುಗೊಂಡಿರುತ್ತವೆ. ತೋಟದ ವಿವಿಧ ಘಟಕಗಳು ಪರಸ್ಪರ ಒಗ್ಗೂಡಿ ಕುಟುಂಬದ ವಿವಿಧ ಅವಶ್ಯಕತೆಗಳು ಮತ್ತು ಆದಾಯದ ಅಗತ್ಯವನ್ನು ಪೂರೈಸುತ್ತದೆ. ಈ ರೀತಿಯ ತೋಟಗಳು ಪರಿಸರ ಸ್ನೇಹಿ ತೋಟಗಳಾಗಿರುತ್ತವೆ. ಅವು ಬಹುಪಯೋಗಿ ಲಾಭಗಳನ್ನು ಗಳಿಸುತ್ತವೆ.

**ಬಯೋಗ್ಯಾಸ್ ಉತ್ಪಾದನೆ ಮತ್ತು ಸಗಣಿ ನೀರಿನ ಮರುಬಳಕೆ**



ತೋಟದ ಸಂಪನ್ಮೂಲಗಳ ಮರುಬಳಕೆಯು ಒಳಸುರಿಯುವಿಕೆಗಳ ವೆಚ್ಚವನ್ನು ತಗ್ಗಿಸುತ್ತದೆ, ಹೊರಸುರಿಯುವಿಕೆಗಳ ಮೇಲಿನ ಅವಲಂಬನೆಯನ್ನು ತಗ್ಗಿಸುತ್ತದೆ, ಉತ್ಪನ್ನಗಳ ಗುಣಮಟ್ಟವನ್ನು ಸುಧಾರಿಸುತ್ತದೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಯಾವುದೇ ಪ್ರತಿಕೂಲ ಹವಾಮಾನ ಪರಿಸ್ಥಿತಿಯಲ್ಲಿಯೂ ತೋಟದ ಸುಸ್ಥಿರತೆಯನ್ನು ಕಾಪಾಡುತ್ತದೆ.

## ಆರಂಭ

ಸಣ್ಣ ಮತ್ತು ಅತಿಸಣ್ಣ ರೈತರು ಕೃಷಿಯನ್ನೇ ಆಧರಿಸಿ ಬದುಕುತ್ತಿದ್ದರೆ ಆಗ ಜಾನುವಾರು/ಕೋಳಿ ಸಾಕಾಣಿಕೆಯನ್ನು ಕೂಡ ಅಳವಡಿಸಿಕೊಂಡಿರುತ್ತಾರೆ. ICAR-CPCRIನವರು ರೈತನೇ ಮೊದಲು FIRST (Farm, Innovation, Resources, Science and Technology) ಎನ್ನುವ ಕಾರ್ಯಕ್ರಮವನ್ನು ಅನುಷ್ಠಾನ- ಗೊಳಿಸಿದ್ದಾರೆ. ಇದನ್ನು ಕೇರಳ ರಾಜ್ಯದ ಅಲಪ್ಪುಜ ಜಿಲ್ಲೆಯ ಪತಿಯೂರ್ ಪಂಚಾಯ್ತಿಯಲ್ಲಿ ಸುಮಾರು 1000 ರೈತ ಕುಟುಂಬಗಳು ಅಳವಡಿಸಿಕೊಂಡವು. ಇವರುಗಳು ಹೊಂದಿದ್ದ ಭೂಮಿ 0.32 ಹೆಕ್ಟೇರ್. ಬಂಡವಾಳ ಹೂಡಿಕೆ ಮತ್ತು ನಿರ್ವಹಣೆಯ ಸಾಮರ್ಥವನ್ನಾಧರಿಸಿ ಒಂದರಿಂದ ಸುಮಾರು 30 ಜಾನುವಾರುಗಳನ್ನು ಹೊಂದಿದ್ದರು.

ಗ್ರಾಮೀಣರ ಭಾಗವಹಿಸುವಿಕೆಯ ಮೂಲಕ ವಿವರ ಸಂಗ್ರಹಣೆ ಅಂದರೆ Participatory Rural Appraisal (PRA)ಅನ್ನು ನಡೆಸಲಾಯಿತು. ಇದರ ಮೂಲಕ ಸಮಾಜದ ಆಸ್ತಿ, ಸಮಯ ಬಳಕೆ, ಸಮಸ್ಯೆಗಳು ಮತ್ತು ಕಾರಣಗಳು, ಕೃಷಿಪದ್ಧತಿಗಳು, ಆಸ್ತಿ ಇತ್ಯಾದಿಗಳನ್ನು ತಿಳಿಯಲಾಯಿತು. ಜಾನುವಾರು ಸಾಕಣೆ ಮಾಡುತ್ತಿದ್ದ ರೈತರು ಮುಖ್ಯವಾಗಿ ಎದುರಿಸುತ್ತಿದ್ದ ಸಮಸ್ಯೆಯೆಂದರೆ ಪ್ರಾಣಿಗಳ ತ್ಯಾಜ್ಯ ನಿರ್ವಹಣೆ. ಶ್ರೀ ಗೋಪಾಲಕೃಷ್ಣ ಪಿಳ್ಳೈ, ಕೊಟ್ಟಿನಾಟ್ಟು ಬುಂಗಲಾವು ಹೇಳುತ್ತಾರೆ "30 ಹಸುಗಳ ಸಗಣಿ, ಗಂಜಲವನ್ನು ಸ್ವಚ್ಛಗೊಳಿಸಿ ಪ್ರಾಣಿಗಳ ಮತ್ತು ಮನೆಯವರ ಆರೋಗ್ಯದ ದೃಷ್ಟಿಯಿಂದ ಕೊಟ್ಟಿಗೆಯನ್ನು ಶುಚಿಯಾಗಿಟ್ಟುಕೊಳ್ಳುವುದು ದೊಡ್ಡ ಸವಾಲಾಗಿತ್ತು. 200 ಲೀಟರ್ ಹಾಲನ್ನು ಮಾರುಕಟ್ಟೆಗೆ ಕೊಂಡೊಯ್ಯಲಾಗುತ್ತಿತ್ತು. ಆದರೆ ಪ್ರಾಣಿಗಳ ತ್ಯಾಜ್ಯದ ದುರ್ಗಂಧವು ಹಾಲಿನ ಉತ್ಪಾದನೆಯ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರಿ ಗ್ರಾಹಕರು ಕೊಳ್ಳಲು ಹಿಂದುಮುಂದೆ ನೋಡುತ್ತಿದ್ದರು". ಅಲ್ಲದೆ ನೆರೆಹೊರೆಯವರು ದೂರುತ್ತಿದ್ದರು. ಜೊತೆಗೆ ಸ್ಥಳೀಯ ಸರ್ಕಾರಿ ಸಂಸ್ಥೆಗಳು ಈ ಘಟಕಗಳ ಮಾಲಿನ್ಯ ನಿಯಂತ್ರಣಕ್ಕೆ ಒತ್ತಡ ಹೇರಿದವು.

ಈ ಸಮಸ್ಯೆಗಳನ್ನು ಪರಿಹರಿಸುವ ಸಲುವಾಗಿ ICAR-CPCRIನವರು ರೈತನೇ ಮೊದಲು FIRST ಎನ್ನುವ ಕಾರ್ಯಕ್ರಮವನ್ನು ರೂಪಿಸಿದರು. ಇದರಲ್ಲಿ ಪ್ರಾಣಿಗಳ ತ್ಯಾಜ್ಯ ನಿರ್ವಹಣೆಗೆ ಹಲವು ದಾರಿಗಳನ್ನು ಸೂಚಿಸಲಾಯಿತು.

1. ಸಗಣಿಯ ಸ್ವರೂಪದ ವಿಶ್ಲೇಷಣೆ (ಗಟ್ಟಿಯಾದದ್ದೋ ಅಥವಾ ತೆಳ್ಳಗಿದೆಯೋ), ದಿನವೊಂದಕ್ಕೆ ಸಂಗ್ರಹವಾಗುವ ಗಂಜಲದ ಪ್ರಮಾಣ ಮತ್ತು ಎಷ್ಟುಬಾರಿ ಕೊಟ್ಟಿಗೆಯನ್ನು ಸ್ವಚ್ಛಗೊಳಿಸುವರು.
2. ರೈತರೇ ಭಾಗಿಯಾಗುವ ಮೂಲಕ ಕೆಲವು ಪ್ರಯೋಗಗಳನ್ನು ನಡೆಸಲಾಯಿತು. ಸಗಣಿ ನೀರು ಮತ್ತು ಗಂಜಲವನ್ನು ತೆಂಗು ತ್ಯಾಜ್ಯ ಮತ್ತು ಕೃಷಿ ತ್ಯಾಜ್ಯವನ್ನು ಬಳಸುವ ಎರೆಹುಳುಗೊಬ್ಬರದ ಘಟಕಗಳಲ್ಲಿ ಬಳಕೆ ಮಾಡಲಾಯಿತು.
3. ಸಗಣಿಯನ್ನು ನೆರಳಿನಲ್ಲಿ ಒಣಗಿಸುವ ಮೂಲಕ ಮಾರುಕಟ್ಟೆಯಲ್ಲಿ ಸಾವಯವ ಉತ್ಪನ್ನವಾಗಿ ಮಾರಾಟ ಮಾಡಬಹುದು.
4. ಗಂಜಲ ಮತ್ತು ಕೊಟ್ಟಿಗೆ ತೊಳೆದ ನೀರನ್ನು ಮೇವು ಮತ್ತು ತರಕಾರಿ ಬೆಳೆಗೆ ಬಳಸಬಹುದು.
5. ಅಡುಗೆಗೆ ಬೇಕಾದ ಅನಿಲ ಉತ್ಪಾದನೆಗೆ ಬಯೋಗ್ಯಾಸ್ ಘಟಕವನ್ನು ಸ್ಥಾಪಿಸಿಕೊಳ್ಳಬಹುದು.

## ಮರುಬಳಕೆಯ ದಾರಿಗಳು

ಶ್ರೀ ಗೋಪಾಲಕೃಷ್ಣ ಅವರಿಗೆ ಒಂದು ಎಕರೆ ತೋಟವಿದೆ. ತೋಟದಲ್ಲಿಯೇ ಮನೆ ಕಟ್ಟಿಕೊಂಡಿದ್ದಾರೆ. ಇವರ ಫಾರಂನಲ್ಲಿ 30 ಹಸುಗಳು ಮತ್ತು ಕರುಗಳಿವೆ. ತರಕಾರಿಗಳನ್ನು ಸಾವಯವ ವಿಧಾನದಲ್ಲಿ 200 ಚೀಲಗಳಲ್ಲಿ ಬೆಳೆಯುತ್ತಾರೆ. ಮೇವಿಗಾಗಿ ಹುಲ್ಲನ್ನು ಬೆಳೆಯುತ್ತಾರೆ. ಹಚ್ಚಹಸಿರಿನಿಂದ ಕೂಡಿದ ಈ ತೋಟದಲ್ಲಿ ವಾರ್ಷಿಕವಾಗಿ 5 –6 ಟನ್ ಗೊಬ್ಬರ ಉತ್ಪಾದನಾ ಸಾಮರ್ಥ್ಯದ ಸಾವಯವ ಗೊಬ್ಬರ ಮತ್ತು ಎರೆಹುಳು ಗೊಬ್ಬರ ಘಟಕಗಳಿವೆ. ಕೃಷಿಹೊಂಡವನ್ನು ಮೀನುಕೃಷಿಗೆ ಬಳಸುತ್ತಿದ್ದಾರೆ. ಬಯೋಗ್ಯಾಸ್ ಘಟಕ, ಹೈಡ್ರೋಫೋನಿಕ್ಸ್ ಮೇವು ಘಟಕ, ತೆಂಗು ಮತ್ತು ಅಂತರಬೆಳೆಗಳಾಗಿ ಗೆಡ್ಡೆಗಳು ಮತ್ತು ಮಸಾಲೆ ಇತ್ಯಾದಿಗಳನ್ನು ಬೆಳೆಸಲಾಗಿದೆ.

ತೆಂಗು ಆಧಾರಿತ ಕೃಷಿ ವ್ಯವಸ್ಥೆಯಲ್ಲಿ ಸಂಪೂರ್ಣವಾಗಿ ಬಲಿತ ತೆಂಗಿನಗರಿಗಳು ಮತ್ತು ಅವುಗಳೊಂದಿಗೆ ಬೆಳೆಯಲಾಗುವ ಬೆಳೆಗಳೆಲ್ಲ ಸೇರಿ 80– 100 ಕೆಜಿಯಷ್ಟು ಸಾವಯವ ತ್ಯಾಜ್ಯವನ್ನು ಉತ್ಪಾದಿಸುತ್ತದೆ. ತೆಂಗಿನ ತ್ಯಾಜ್ಯದಿಂದ ಎರೆಹುಳುಗೊಬ್ಬರ ತಯಾರಿಕೆಗೆ ICAR-CPCRI ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲಾಯಿತು. ತೆಂಗಿನ ತ್ಯಾಜ್ಯಗಳಾದ ಗರಿಗಳು, ಇತರೆ ತೆಂಗಿನ ಭಾಗಗಳು, ತೆಂಗಿನೊಂದಿಗೆ ಬೆಳೆದ ಮೇವು, ಇತರ ಗಿಡಗಳು, ಬಾಳೆ, ತರಕಾರಿ ಇವುಗಳ ತ್ಯಾಜ್ಯವನ್ನು ಕೂಡ ಸೇರಿಸಲಾಯಿತು.

ಅವರ ಹೆಂಡತಿ ಶ್ರೀಮತಿ ಉಷಾ ಅವರು ಸಗಣಿ ನೀರನ್ನು ಎರೆಹುಳುಗೊಬ್ಬರ ಘಟಕಕ್ಕೆ ಸಿಂಪಡಿಸುತ್ತಾರೆ. ಕೊಟ್ಟಿಗೆಯಲ್ಲಿ ಉಳಿದ ಆಹಾರ, ತೋಟದಲ್ಲಿ ಉದುರಿರುವ ಮಾವು, ಹಲಸು ಇತ್ಯಾದಿಗಳ ಎಲೆಗಳನ್ನೆಲ್ಲ ಸಂಗ್ರಹಿಸುತ್ತಾರೆ. ತರಕಾರಿ ಕೃಷಿಗೆ ನೆರವು ನೀಡುವ ಸಗಣಿ ನೀರಿನ ತಯಾರಿಕೆಗೂ ನೆರವು ನೀಡುತ್ತಾರೆ. ಆಕೆ ಹೇಳುತ್ತಾರೆ "ಎರೆಹುಳುಗೊಬ್ಬರದ ಘಟಕದಿಂದಾಗಿ 60–70% ತ್ಯಾಜ್ಯದ ಪ್ರಮಾಣವು ಕಡಿಮೆಯಾಗಿದೆ. ತೋಟದ ಮನೆಗಳಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳುವುದರೊಂದಿಗೆ ತೋಟದಲ್ಲಿರುವ ಕುಟುಂಬ ಮತ್ತು ತೋಟ ಇಬ್ಬರ ಹಿತದೃಷ್ಟಿಯಿಂದಲೂ ಮರುಬಳಕೆ ಅತ್ಯಗತ್ಯ."

ಅಡುಗೆಮನೆಯ ಬೂದಿ ಮತ್ತು ಮೀನಿನ ತ್ಯಾಜ್ಯವನ್ನು ನೇರವಾಗಿ ತೆಂಗಿನ ಮಡಿಗಳಿಗೆ ಹಾಕಲಾಗುತ್ತದೆ. ವಾರಕ್ಕೊಮ್ಮೆ ಸರಾಸರಿ 10–12 ಕೆಜಿಗಳಷ್ಟು ಬೂದಿ ಸಿಗುತ್ತದೆ. ತೆಂಗಿನ ಸಸಿಗಳಿಗೆ ವಾರಕ್ಕೊಮ್ಮೆ ರೋಗ ಮತ್ತು ಕೀಟ ಭಾದೆ ತಡೆಯಲು ಬೂದಿಯನ್ನು ಸಿಂಪಡಿಸಲಾಗುತ್ತದೆ.


**ಅಕ್ಕಿಯ ಗಂಜಿಯನ್ನು ಬಾಳೆ ಗಿಡ ಮತ್ತಿತರ ತರಕಾರಿ ಗಿಡಗಳಿಗೆ ಕೀಟನಿಯಂತ್ರಣಕ್ಕಾಗಿ ಸಿಂಪಡಿಸಲಾಗುತ್ತದೆ.**

ಅದೇ ರೀತಿ ಅಕ್ಕಿ ಗಂಜಿಯನ್ನು ಬಾಳೆ ಮತ್ತಿತರ ತರಕಾರಿ ಗಿಡಗಳಿಗೆ ಕೀಟನಿಯಂತ್ರಣಕ್ಕಾಗಿ ಸಿಂಪಡಿಸಲಾಗುತ್ತದೆ. ಕಳೆಯನ್ನು ಮರುಬಳಕೆ ಮಾಡುವಲ್ಲಿ ಮಹಿಳೆಯರು ಮುಖ್ಯಪಾತ್ರ ವಹಿಸುತ್ತಾರೆ. ಬಾಳೆ/ಹಲಸಿನ ತಾಜಾ ಇಲ್ಲವೇ ಹಣ್ಣಾದ ಎಲೆಗಳನ್ನು ದಿನವೂ ಹಸುಗಳಿಗೆ, ಮೇಕೆಗಳಿಗೆ ಮತ್ತು ಕೋಳಿಗಳಿಗೆ ಮೇವಾಗಿ ನೀಡಲಾಗುತ್ತದೆ. ಹಿತ್ತಲಿನ ಕೋಳಿ ಸಾಕಾಣಿಕೆಯು ಮನೆಯ ಊಟದ ತ್ಯಾಜ್ಯ, ಮೀನಿನ ತ್ಯಾಜ್ಯ ಮತ್ತು ಭತ್ತದ ತ್ಯಾಜ್ಯದ ಮರುಬಳಕೆ ಘಟಕವಾಗಿ ಕಾರ್ಯನಿರ್ವಹಿಸುತ್ತದೆ. ಕೃಷಿ ತ್ಯಾಜ್ಯದ ಮರುಬಳಕೆಯಿಂದಾಗಿ ಮನೆಗೆ ತಾಜಾ ತರಕಾರಿಗಳು ಇಲ್ಲವೆ ಮೊಟ್ಟೆಗಳು ಸಿಗುತ್ತದೆ.

ಶ್ರೀ ಗೋಪಾಲಕೃಷ್ಣ ಪಿಳ್ಳೈ ಅವರು ಹೇಳುತ್ತಾರೆ "ತಾಜಾ ಸಗಣಿಯ ಸಾಗಾಣಿಕೆ ಕಷ್ಟ. ಇದಕ್ಕೆ ತಗಲುವ ಕೂಲಿ ವೆಚ್ಚವೂ ಹೆಚ್ಚಾಗಿರುವುದರಿಂದ ಹೆಚ್ಚಿನ ಬೇಡಿಕೆಯಿಲ್ಲ. ಜೊತೆಗೆ ಮಳೆಗಾಲದಲ್ಲಿ ಇದನ್ನು ಸಂಗ್ರಹಿಸುವುದು ದೊಡ್ಡ ತಲೆನೋವಿನ ಸಂಗತಿ. ಎರೆಹುಳು ಗೊಬ್ಬರದ ಮೂಲಕ ಸಗಣಿಯ ಮೌಲ್ಯವರ್ಧನೆ ಮಾಡಬಹುದು. ತೋಟಕ್ಕೆ ಬೇಕಾಗುವಷ್ಟು ಎರೆಹುಳುಗೊಬ್ಬರವನ್ನು ಉತ್ಪಾದಿಸುತ್ತಿದ್ದೇನೆ. ಬಳಕೆಯ ನಂತರ ಉಳಿದ ಗೊಬ್ಬರವನ್ನು ಮಾರಾಟ ಮಾಡುತ್ತಿದ್ದೇನೆ". ನೆರಳಿನಲ್ಲಿ ಒಣಗಿಸಲಾದ ಹಸುವಿನ ಗೊಬ್ಬರಕ್ಕೆ ಹೆಚ್ಚಿನ ಬೇಡಿಕೆಯಿದೆ. ಅರೆಕಾಲಿಕ ಕೃಷಿ ಮಾಡುವ ನಗರಗಳ ಜನ ಇದನ್ನು ಕೊಳ್ಳುತ್ತಾರೆ. ಕೆಜಿಗೆ ರೂ.12ರಷ್ಟು ಲಾಭವನ್ನು ರೈತ ಪಡೆಯುತ್ತಾನೆ. ಶ್ರೀ ಗೋಪಾಲಕೃಷ್ಣ ಪಿಳ್ಳೈ ಅವರು ವರ್ಷಕ್ಕೆ 5 – 6 ಟನ್ ಎರೆಹುಳಗೊಬ್ಬರ ವ್ಯಾಪಾರ ಮಾಡುವ ಮೂಲಕ ಆದಾಯವನ್ನು ಗಳಿಸುತ್ತಿದ್ದಾರೆ.

ಗೋಪಾಲಕೃಷ್ಣ ಪಿಳ್ಳೈ ಅವರು ಪ್ರತಿ ದಿನ 200–300 ಲೀಟರ್ ಹಾಲನ್ನು ಮಾರಾಟಮಾಡುತ್ತಾರೆ. ಇದರೊಂದಿಗೆ ಗಂಜಲ, ಸಗಣಿ ಮತ್ತು ಬಯೋಗ್ಯಾಸ್ ತ್ಯಾಜ್ಯದ ಮರುಬಳಕೆಯಿಂದ ರುಚಿಕರವಾದ ತಾಜಾ ತರಕಾರಿಯನ್ನು ಬೆಳೆಯುತ್ತಿದ್ದಾರೆ.

ಬ್ಯಾಂಕರ್ ಆಗಿದ್ದ ಗೋಪಾಲಕೃಷ್ಣ ಪಿಳ್ಳೈ ಅವರು ಮಾದರಿ ಕೃಷಿಕರಾಗಿದ್ದಾರೆ. ಪ್ರತಿದಿನ ಇವರ ತೋಟಕ್ಕೆ 100 ಮಂದಿ ಸಂದರ್ಶಕರು ಭೇಟಿ ನೀಡುತ್ತಾರೆ. ಹಲವು ಮಾದರಿಗಳನ್ನು ಒಗ್ಗೂಡಿಸಿ ಮಾಡುತ್ತಿರುವ ಕೃಷಿ ವಿಧಾನ, ಕೃಷಿ ತ್ಯಾಜ್ಯಗಳ ಮರುಬಳಸಿ ಉತ್ಪಾದಿಸುತ್ತಿರುವ ಗೊಬ್ಬರ, ಹಸಿರು ಮೇವು, ಮೀನಿನ ಹೊಂಡ, ತರಕಾರಿಗಳು ಮತ್ತು ಹಣ್ಣುಗಳು ಇವೆಲ್ಲವನ್ನೂ ಇಲ್ಲಿ ಕಾಣಬಹುದಾಗಿದೆ. ಇಲ್ಲಿ ಸಿಗುವ ತಾಜಾ ತರಕಾರಿಗಳ ಬಗ್ಗೆ ಮಹಿಳೆಯರು ಸಂತಸ ವ್ಯಕ್ತಪಡಿಸುತ್ತಾರೆ. ಈ ರೀತಿಯ ವಿಧಾನದಲ್ಲಿ ಬೆಳೆಯಲಾದ ತರಕಾರಿಗಳು ಬೇಗ ಹಾಳಾಗುವುದಿಲ್ಲ. ಯಾವುದೇ ಮನೆಯವರು ತಮ್ಮ ಮನೆಯ ಸಾವಯವ ತ್ಯಾಜ್ಯವನ್ನು ದ್ರವ ಗೊಬ್ಬರ, ಘನ ಗೊಬ್ಬರ, ಎರೆಹುಳುಗೊಬ್ಬರ ಇತ್ಯಾದಿಯಾಗಿ ಮರುಬಳಕೆ ಮಾಡುವ ಮೂಲಕ ರುಚಿಕರವಾದ ತರಕಾರಿಯಾಗಿ ಪರಿವರ್ತಿಸಬಹುದು.




ಚಿತ್ರ 1 : ತೆಂಗು ಕೃಷಿ ಆಧಾರಿತ ತೋಟದ ಮನೆಯಲ್ಲಿನ ಸಂಪನ್ಮೂಲ ಮರುಬಳಕೆ ವ್ಯವಸ್ಥೆಯ ಮಾದರಿ



ಮಹಿಳೆಯರು ಕೃಷಿ ತ್ಯಾಜ್ಯಗಳನ್ನು ಬೆಳೆ ಬೆಳೆಯಲು ಮರುಬಳಕೆಗೆ ಸಿದ್ಧಗೊಳಿಸುತ್ತಿರುವುದು

ಗೋಪಾಲಕೃಷ್ಣ ಪಿಳ್ಳೈ ಅವರು ಸಾವಯವ ಕೃಷಿ ಪದ್ಧತಿಗಳನ್ನು ಅನುಸರಿಸುತ್ತಿರುವುದನ್ನು ನೋಡಿ ಪಂಚಾಯತ್‌ನವರು ಅವರಿಗೆ ಉತ್ತಮ ಕೃಷಿಕ ಪ್ರಶಸ್ತಿ ನೀಡಿದ್ದಾರೆ. ಅವರ ತೋಟವು ಸಂಪನ್ಮೂಲ ಮರುಬಳಕೆ ಮತ್ತು ಸ್ವಾವಲಂಬಿ ಕೃಷಿಯ ಅತ್ಯುತ್ತಮ ಮಾದರಿಯಾಗಿದೆ.

## ಸಾಮಾಜಿಕವಾಗಿ ಮನ್ನಣೆ ಪಡೆಯುತ್ತಿರುವ ಮಾದರಿ

ಸಂಪನ್ಮೂಲ ಮರುಬಳಕೆಯ ಮಾದರಿಯನ್ನು 15 ಕುಟುಂಬಗಳು ಅಳವಡಿಸಿಕೊಂಡಿವೆ. ಕೃಷಿ ತ್ಯಾಜ್ಯ ಮರುಬಳಕೆ ಹಾಗೂ ಮೌಲ್ಯವರ್ಧನೆ ಘಟಕಗಳನ್ನು ಅಳವಡಿಸಲಾಗಿದ್ದು ರೈತರು ಒಗ್ಗೂಡಿಸಿದ ಕೃಷಿ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ಪತಿಯೂರ್ ಪಂಚಾಯತ್‌ನ ಅಧ್ಯಕ್ಷರಾದ ಶ್ರೀ ವಿ. ಪ್ರಭಾಕರನ್ ಅವರು ಈ ಹದಿನೈದು ಮಂದಿ ಯುವ ಕೃಷಿಕರು ಈ ಕಾರ್ಯದಲ್ಲಿ ಯಶಸ್ಸು ಗಳಿಸುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸುತ್ತಾರೆ. ಇವರಲ್ಲಿ ಏಳು ಮಂದಿ ಮಹಿಳೆಯರು ಸೇರಿದ್ದಾರೆ. ಸಂಪನ್ಮೂಲಗಳ ಮರುಬಳಕೆಯಿಂದ ಅವರು ಸ್ವಲ್ಪ ಮಟ್ಟಿಗಿನ ಆದಾಯವನ್ನು ಕೂಡ ಗಳಿಸಬಹುದಾಗಿದೆ. "ಪಂಚಾಯ್ತಿಗಳ ಮಟ್ಟದಲ್ಲಿ ವಿಕೇಂದ್ರಿಕೃತ ವ್ಯವಸ್ಥೆಯಡಿಯಲ್ಲಿ ಕೃಷಿ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಮತ್ತು ಪರಿಣಾಮಕಾರಿಯಾಗಿ ಮಾಡುವ ಮೂಲಕ ಗ್ರಾಮೀಣ ಭಾಗದಲ್ಲಿ ಸುರಕ್ಷಿತವಾದ, ರುಚಿಕರವಾದ ಮತ್ತು ಪೌಷ್ಟಿಕಾಂಶಯುಕ್ತ ಆಹಾರವನ್ನು ಉತ್ಪಾದಿಸಲು ಉತ್ತೇಜನ ನೀಡಬಹುದಾಗಿದೆ. ಸ್ಥಳೀಯ ಸಂಪನ್ಮೂಲಗಳ ಮರುಬಳಕೆ ಮಾಡುವಲ್ಲಿ ಮಹಿಳಾ ಕೃಷಿಕರು ಮಹತ್ವದ ಪಾತ್ರವನ್ನು ವಹಿಸುತ್ತಾರೆ. ಕಳೆಗಳನ್ನು ಮತ್ತು ಜಾನುವಾರು, ಮೀನು, ಕೋಳಿ ಸಾಕಣೆ ಮತ್ತಿತರ ಚಟುವಟಿಕಗಳಲ್ಲಿ ಉತ್ಪಾದಿತವಾಗುವ ತ್ಯಾಜ್ಯವನ್ನು ಸುಡುವ ಇಲ್ಲವೆ ಬಿಸಾಡುವ ಬದಲು ಮಣ್ಣಿಗೆ ಸೇರಿಸಿ ಎಂದು ಅವರಿಗೆ ಸಲಹೆ ನೀಡುತ್ತಿದ್ದೇವೆ" ಎಂದು ಹೇಳುತ್ತಾರೆ.

ಸಾವಯವ ಕೃಷಿ ತ್ಯಾಜ್ಯಗಳ ವ್ಯವಸ್ಥಿತ ಮರುಬಳಕೆ ಮತ್ತು ಮೌಲ್ಯವರ್ಧನೆಯು ತೋಟದ ಉತ್ಪಾದನೆಯನ್ನು ಹೆಚ್ಚಿಸುವುದರೊಂದಿಗೆ ಮಣ್ಣಿಗೆ ಪೌಷ್ಟಿಕಾಂಶಗಳನ್ನು ಒದಗಿಸುವ ಮೂಲಕ ಹೆಚ್ಚು ಸ್ವಾವಲಂಬಿಯಾಗಿಸುತ್ತದೆ. ಎರೆಹುಳುಗೊಬ್ಬರ ಮಣ್ಣಿನಲ್ಲಿನ ಜೀವಾಣು ಸಂರಕ್ಷಣೆ ಮತ್ತು ಬೆಳವಣಿಗೆಗೆ ಸಹಾಕಾರಿಯಾಗಿದೆ. ಇದರೊಂದಿಗೆ ಬೆಳೆಗಳಿಗೆ ಸಹಜವಾದ ರುಚಿ ಮತ್ತು ಗಂಧವನ್ನು ತಂದುಕೊಡುತ್ತದೆ. ಬಯೋಗ್ಯಾಸ್ ಉತ್ಪಾದನೆ ಮಾಡಿ ಬಯೋಅನಿಲವಾಗಿ ಬಳಸುವುದರಿಂದ ತೋಟದಲ್ಲಿ ನೇರವಾಗಿ ಅನಿಲ ಪ್ರಸರಣವಾಗುವುದು ತಪ್ಪುತ್ತದೆ. ಹಲವು ವಿಧಗಳಲ್ಲಿ ಸಂಪನ್ಮೂಲಗಳ ಮರುಬಳಕೆಯ ಮೂಲಕ ಪರಿಸರಕ್ಕೆ ಕೊಡುಗೆ ನೀಡುವುದರೊಂದಿಗೆ ಆದಾಯವನ್ನು ಕೂಡ ಗಳಿಸಬಹುದಾಗಿದೆ. ಒಟ್ಟಾರೆಯಾಗಿ ಸಂಪನ್ಮೂಲ ಮರುಬಳಕೆ ಎನ್ನುವುದು ಹವಾಮಾನ ಬದಲಾವಣೆಯನ್ನು ತಾಳಿಕೊಳ್ಳುವಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಹೆಚ್ಚಿನ ನೆರವನ್ನು ನೀಡುತ್ತದೆ.

◆

**Anithakumari P**
Principal Scientist (Agrl. Extension*)
E-mail: anithacpcri@gmail.com

**Induja S**
Scientist (Microbiology)
ICAR Central Plantation Crops
Research Institute
Krishnapuram P.O., Kayamkulam, Kerala

**ಆಂಗ್ಲ ಮೂಲ :**
ಲೀಸಾ ಇಂಡಿಯಾ, ಸಂಪುಟ 21, ಸಂಚಿಕೆ 2, ಜೂನ್ 2019.

# ದೇಸಿ ಸಂಸ್ಕೃತಿಯನ್ನು ಉಳಿಸಿಕೊಳ್ಳುವ ಮೂಲಕ ಸ್ಥಳೀಯ ಜೀವನಮಟ್ಟ ಸುಧಾರಣೆ

**ಲಕ್ಷ್ಮಿ ಉನ್ನಿತನ್**

**ಭವಿಷ್ಯದ ಆಹಾರ ಅಗತ್ಯ ಪೂರೈಕೆ, ಸ್ಥಳೀಯ ಸಂಪನ್ಮೂಲಗಳ ಸಂರಕ್ಷಣೆ, ಪೌಷ್ಟಿಕಾಂಶಗಳ ಸುಧಾರಣೆ ಹಾಗೂ ಕೃಷಿ ಮತ್ತು ಕೃಷಿಕರ ಜೀವನಮಟ್ಟ ಸುಧಾರಣೆ ಇವು 21ನೇ ಶತಮಾನದ ಬಹುದೊಡ್ಡ ಸವಾಲುಗಳು. ಈ ಸವಾಲುಗಳನ್ನು ಎದುರಿಸಲು ಸಮಸ್ಯೆ ಪರಿಹರಿಸುವ ಹೊಸ ವಿಧಾನಗಳು, ಹೊಸ ಬಗೆಯ ಚಿಂತನೆ ಮತ್ತು ಹೊಸ ಪಾಲುದಾರಿಕೆಗಳನ್ನು ಅಳವಡಿಸಿಕೊಳ್ಳಬೇಕಾಗಿದೆ.**

ತುರ್ತಾಗಿ ಆಹಾರ ಉತ್ಪಾದನೆ, ಸಂಸ್ಕರಣೆ, ಸಾಗಣೆ, ಸಂಗ್ರಹಣೆ, ವಿತರಣೆ ಮತ್ತು ಬಳಕೆ ಇವುಗಳ ಸ್ವರೂಪದಲ್ಲಿ ಬದಲಾವಣೆಗಳಾಗಬೇಕಾಗಿದೆ. ಕೃಷಿಪರಿಸರವನ್ನು ಉತ್ತಮಗೊಳಿಸುವುದರಿಂದ ಆಹಾರ ಭದ್ರತೆ, ತಾಳಿಕೆ, ಜೀವನಮಟ್ಟ ಮತ್ತು ಸ್ಥಳೀಯ ಆರ್ಥಿಕತೆ ಚೇತರಿಕೆ, ಆಹಾರ ಉತ್ಪಾದನೆಯಲ್ಲಿ ವೈವಿಧ್ಯತೆ, ಆರೋಗ್ಯ ಮತ್ತು ಪೌಷ್ಟಿಕಾಂಶ ಮಟ್ಟದಲ್ಲಿ ಸುಧಾರಣೆ, ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ, ಜೈವಿಕ ವೈವಿಧ್ಯತೆ ಹಾಗೂ ಪರಿಸರವ್ಯವಸ್ಥೆ ಇವೆಲ್ಲವೂ ಕೂಡ ಉತ್ತಮಗೊಳ್ಳುತ್ತವೆ. ಕೃಷಿಪರಿಸರವನ್ನು ಉತ್ತಮಗೊಳಿಸಲು ಕುಟುಂಬದ ಸದಸ್ಯರ ಸಹಭಾಗಿತ್ವ ಅತ್ಯಗತ್ಯ. ಅದರಲ್ಲೂ ಸಣ್ಣ ರೈತ ಕುಟುಂಬದ ಮಹಿಳೆಯರು ಮತ್ತು ಯುವಜನಾಂಗವು ಇದರಲ್ಲಿ ಭಾಗಿಯಾಗಬೇಕು.

ಈ ಸಂದರ್ಭದಲ್ಲಿ ಹೊಸ ರೀತಿಯಲ್ಲಿ ಸಮಸ್ಯೆಗಳನ್ನು ಬಗೆಹರಿಸುವಂತಹವರು, ಹೊಸ ರೀತಿಯಲ್ಲಿ ಯೋಚಿಸಿ ಜೀವನಮಟ್ಟ,

**ನಗರ ಪ್ರದೇಶಗಳ ಉತ್ಸಾಹಿ ಸ್ನೇಹಿತರು ಕೃಷಿ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದು**



ಆರ್ಥಿಕತೆ, ಆಹಾರ ಪೌಷ್ಟಿಕಾಂಶವನ್ನು ಉತ್ತಮಗೊಳಿಸುವವರು ಮತ್ತು ವೈವಿಧ್ಯಮಯ ಆಹಾರ ಉತ್ಪಾದನೆಯನ್ನು ಉತ್ತಮಗೊಳಿಸಬಲ್ಲ ವ್ಯಕ್ತಿಗಳ ಅಗತ್ಯವಿದೆ. ಜಾನಪದತಜ್ಞೆ ಮತ್ತು ಬುಡ ಜಾನಪದ ವಸ್ತುಸಂಗ್ರಹಾಲಯ ಎನ್ನುವ ಸಾಂಸ್ಕೃತಿಕ ಕೇಂದ್ರದ ಸ್ಥಾಪಕಿಯಾದ ಸವಿತಾ ಉದಯ್ ಎನ್ನುವ ಶಿಕ್ಷಕಿಯ ಪಯಣದ ಕತೆ ಸ್ಫೂರ್ತಿದಾಯಕವಾದದ್ದು. ಬಹುಮುಖಪ್ರತಿಭೆಯ ಮಹಿಳೆಯಾದ ಈಕೆ ಹಲವರಿಗೆ ಸ್ಫೂರ್ತಿದಾಯಕವಾಗಿದ್ದಾಳೆ. ಸ್ಥಳೀಯ ಬದುಕು ಮತ್ತು ಆರ್ಥಿಕತೆಯನ್ನು ಉತ್ತಮಗೊಳಿಸುವ, ಆಹಾರ ಉತ್ಪಾದನೆಯಲ್ಲಿ ವೈವಿಧ್ಯತೆಯನ್ನು ತಂದು ಆರೋಗ್ಯ ಮತ್ತು ಪೌಷ್ಟಿಕಾಂಶ ಮಟ್ಟದಲ್ಲಿ ಸುಧಾರಣೆ ತರುವುದು, ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ, ಜೀವವೈವಿಧ್ಯತೆ ಮತ್ತು ಪರಿಸರವ್ಯವಸ್ಥೆಯ ಸಂರಕ್ಷಣೆಯನ್ನು ಆಕೆಯ ಕತೆ ತೆರೆದಿಡುತ್ತದೆ.

ಸವಿತಾ ಉದಯ್ ತಮ್ಮ ಪಿಎಚ್‌ಡಿ ಮುಗಿಸಿದ ಬಳಿಕ ಕೆಲವು ಶಾಲೆಗಳಲ್ಲಿ ಕೆಲಸಮಾಡಿದರು. ಬಹುಬೇಗನೇ ತರಗತಿಗಳಲ್ಲಿ ಪಾಠಮಾಡುವುದರ ಹಿಂದಿನ ಮಿತಿಯನ್ನು ಕಂಡುಕೊಂಡರು. ಹೀಗಾಗಿ ಅಹಮದಾಬಾದ್, ಬೆಂಗಳೂರು, ಮಸ್ಕಟ್ ಹೀಗೆ ವಿವಿಧೆಡೆಗಳಲ್ಲಿ ಸಾಂಪ್ರದಾಯಿಕ ಹಾಗೂ ಅಸಾಂಪ್ರದಾಯಿಕ ಶಾಲೆಗಳಲ್ಲಿ ಪಾಠಮಾಡಿದರು. ಬೆಂಗಳೂರಿನ ಪ್ರಕ್ರಿಯಾ ಮತ್ತು ವ್ಯಾಲಿ ಶಾಲೆಗಳಂತಹ ಅಸಾಂಪ್ರದಾಯಿಕ ಶಾಲೆಗಳಲ್ಲಿ ಪಾಠ ಮಾಡಿದರು. ಸವಿತ ಶಾಲೆಯಲ್ಲಿ ಭೂಗೋಳವನ್ನು ಪಾಠಮಾಡುತ್ತಿದ್ದರು. ಬಹುತೇಕ ಮಕ್ಕಳಿಗೆ ಭೂಮಿ, ಕಾಡು ಮತ್ತು ನದಿಗಳ ಅನುಭವವಿಲ್ಲದಿರುವುದನ್ನು ಆಕೆ ಕಂಡುಕೊಂಡರು. ಶಾಲೆಗಿಂತ ಪರಿಸರದ ನಡುವೆ ಮಕ್ಕಳಿಗೆ ಪಾಠ ಹೇಳುವುದರ ಮಹತ್ವವನ್ನು ಕಂಡುಕೊಂಡರು. ಆಕೆ ತಮ್ಮ ಕೆಲಸಕ್ಕೆ ರಾಜೀನಾಮೆ ನೀಡಿ ಶಾಲೆಗಳಿಗೆ ಹೊಸದೊಂದು ಪಠ್ಯಕ್ರಮವನ್ನು ರೂಪಿಸಿದರು. ನಿಸರ್ಗದ ನಡುವೆ ಮಕ್ಕಳು ಹೆಚ್ಚು ಚೆನ್ನಾಗಿ ಕಲಿಯಬಲ್ಲರು ಎನ್ನುವುದರಲ್ಲಿ ಆಕೆಗೆ ನಂಬಿಕೆಯಿತ್ತು.

ಸವಿತಾ ಉದಯ್ ಅವರು ರೂಪಿಸಿದ ಬುಡ ಸ್ಟಡಿ ಟೂರ್ ಪ್ರೋಗ್ರಾಂ ಶಾಲೆಗಳು, ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗೆ

**ಚೌಕ 1 : ಬುಡ ಕಾರ್ಯಕ್ರಮ**

ಕನ್ನಡದಲ್ಲಿ ಬುಡ ಎಂದರೆ ತಳ, ಆಧಾರ ಎಂದರ್ಥ. ಎಲ್ಲವೂ ಇದರ ಮೇಲೆಯೇ ನಿರ್ಮಾಣವಾಗುತ್ತದೆ. ಪ್ರಸ್ತುತ ಬುಡ ಜಾನಪದವು ಹೊನ್ನಾವರ ಮತ್ತು ಅಂಗಡಿಬೈಲು (ಅಂಕೋಲ) ಎರಡು ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಆಕೆಯ ಕಾರ್ಯಕ್ರಮಗಳು ಮೊದಲಾದದ್ದು ಅವರ ತವರೂರಾದ ಹೊನ್ನಾವರದಲ್ಲಿ. ಡಾ. ಶಾಂತಿ ನಾಯಕ್ ಮತ್ತು ಡಾ. ಎನ್.ಆರ್. ನಾಯಕ್ ಅವರ ತಂದೆ ತಾಯಿ. ಇಬ್ಬರೂ ಕನ್ನಡ ಪ್ರಾಧ್ಯಾಪಕರು. ಸತತ 40 ವರ್ಷಗಳಿಂದ ಉತ್ತರಕನ್ನಡದ ಜಾನಪದವನ್ನು ಕಾಪಿಡುವ ಕೆಲಸವನ್ನು ಮಾಡುತ್ತಿದ್ದಾರೆ. ಅವರು ಸುಮಾರು 80ಕ್ಕೂ ಹೆಚ್ಚು ಪುಸ್ತಕಗಳನ್ನು ರಚಿಸಿದ್ದಾರೆ. ಸಾಹಿತ್ಯ, ಕಲೆ, ಕರಕುಶಲ ಕಲೆ, ನೃತ್ಯ, ಆಹಾರ, ಪಾನೀಯ, ಹಾಡುಗಳು, ಆಟಗಳು, ಔಷಧಿಯ ಸಸ್ಯಗಳು ಮತ್ತು ವಸ್ತ್ರಗಳು ಹೀಗೆ ವಿವಿಧ ಬಗೆಗಳಲ್ಲಿ ಜಾನಪದವನ್ನು ಕಾಪಾಡಿಕೊಂಡುಬಂದಿದ್ದಾರೆ. ಬುಡ ಕಾರ್ಯಕ್ರಮಗಳನ್ನು ಈ ಸ್ಥಳಗಳಲ್ಲಿ ನಡೆಸಲಾಗುತ್ತದೆ. ನಿಸರ್ಗ ಮತ್ತು ಮನುಷ್ಯನ ನಡುವಿನ ಸಂಬಂಧ, ಈ ಸಮುದಾಯಗಳ ಸಂಸ್ಕೃತಿಯನ್ನು ಇಲ್ಲಿ ಅರಿಯಬಹುದಾಗಿದೆ. ಬುಡ ಜಾನಪದವು ಪ್ರಯೋಗಶೀಲ ಕಲಿಕೆಯಲ್ಲಿ ನಂಬಿಕೆಯನ್ನಿಟ್ಟಿದೆ. ಅದಕ್ಕೆ ತಕ್ಕನಾಗಿ ಶಾಲಾ ಕಾಲೇಜುಗಳಿಗೆ ಕಲಿಕೆಯ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಇದರಲ್ಲಿ ಉತ್ತರ ಕನ್ನಡದ ಕರಾವಳಿ ಪ್ರದೇಶದ ನೈಸರ್ಗಿಕ ಸಮೃದ್ಧಿ ಮತ್ತು ಸಾಂಸ್ಕೃತಿಕ ಪರಂಪರೆಯ ಕುರಿತು ತಿಳಿಯಬಹುದಾಗಿದೆ.

**ಅಧ್ಯಯನ ಪ್ರವಾಸ ಕಾರ್ಯಕ್ರಮ**

**ನದಿ ಮಾರ್ಗ**

ಇದು ಶರಾವತಿಯ ಉಗಮ ಸ್ಥಾನದಿಂದ ಹಿಡಿದು ಅದು ಅರೇಬಿಯನ್ ಸಮುದ್ರ ಸೇರುವವರೆಗಿನ ಹಾದಿಯನ್ನು ಒಳಗೊಂಡಿದೆ. ಚಾರಣ, ದೋಣಿ ಮತ್ತು ರಸ್ತೆಯ ಮೂಲಕ ಈ ಹಾದಿಯನ್ನು ಕ್ರಮಿಸಲಾಗುತ್ತದೆ. ಈ ಪಯಣದಲ್ಲಿ ವಿದ್ಯಾರ್ಥಿಗಳು ಸುಂದರವಾದ ಐತಿಹಾಸಿಕ ದ್ವೀಪಗಳು, ನದೀ ತೀರ ಪ್ರದೇಶಗಳು, ನದಿ ಸೃಷ್ಟಿಸಿದ ವಿವಿಧ ಭೂಭಾಗಗಳು, ಕರಕುಶಲಕಲೆ, ಕಲೆ, ಆಹಾರ, ಜನಪದ ದೇವತೆಗಳು ಮತ್ತು ಜನ ಹಾಗೂ ಅವರ ಬದುಕಿನ ಕ್ರಮವನ್ನು ನೋಡಿ ತಿಳಿಯುತ್ತಾರೆ.

**ಸಮುದ್ರ ಮಾರ್ಗ**

ಸಮುದ್ರ ತೀರ ಚಾರಣವು ಹೊನ್ನಾವರದಿಂದ ಗೋಕರ್ಣದವರೆಗಿದೆ. ಬೆಟ್ಟ ಮಾರ್ಗವನ್ನು ಹಾದು ಸಮುದ್ರತೀರಗಳಲ್ಲಿ ಕ್ಯಾಂಪಿಂಗ್ ಮಾಡಲಾಗುತ್ತದೆ. ಈ ಭಾಗದಲ್ಲಿ ಮಾತ್ರ ಸಾಧ್ಯವಾಗುವಂತಹ ವಿಶಿಷ್ಟ ಚಾರಣ. ಇಲ್ಲಿ ನಮಗೆ ಎದುರಾಗುವವರು ಹಾಲಕ್ಕಿ ಸಮುದಾಯದವರು ಮತ್ತು ಮೀನುಗಾರರು.

**ಕಾಡು ಮಾರ್ಗ**

ವಿದ್ಯಾರ್ಥಿಗಳು ಕಾಡಿನಲ್ಲಿ ವಾಸವಿರುತ್ತಾರೆ. ಇದಕ್ಕಾಗಿಯೇ ಉತ್ತರ ಕನ್ನಡ ಜಿಲ್ಲೆಯ ಅಂಗಡಿಬೈಲಿನಲ್ಲಿ ಕಾಡು, ಝರಿಗಳು ಮತ್ತು ಗಿರಿಶ್ರೇಣಿಗಳಿಂದ ಆವೃತವಾದ ಭತ್ತದ ಬಯಲಿನ ನಡುವೆ ತೋಟದ ಮನೆಯನ್ನು ನಿರ್ಮಿಸಲಾಗಿದೆ. ವಿದ್ಯಾರ್ಥಿಗಳು ಈ ಪ್ರದೇಶದ ಶ್ರೀಮಂತ ಜಾನಪದ ಪರಂಪರೆಯನ್ನು ಪರಿಚಯಿಸಿಕೊಳ್ಳುತ್ತಾರೆ. ಈ ಪ್ರದೇಶದಲ್ಲಿ ವಾಸಿಸುವ ವಿವಿಧ ಸಮುದಾಯಗಳ ಜನರನ್ನು ಪರಿಚಯಿಸಿಕೊಳ್ಳುತ್ತಾರೆ (ಹಾಲಕ್ಕಿ, ಗಾಮೊಕ್ಕಲು, ಗೊಂಡಾ, ಸಿದ್ಧಿ ಮತ್ತು ಕರೆ ಒಕ್ಕಲು). ಈ ಸಮುದಾಯದವರ ಆಹಾರ, ಕಲೆ, ಕರಕುಶಲಕಲೆ, ಸಂಗೀತ, ನೃತ್ಯ, ವಾಸ್ತುಶಿಲ್ಪ ಮತ್ತು ಅವರ ಬದುಕಿನ ಕ್ರಮವನ್ನು ಅಭ್ಯಸಿಸುತ್ತಾರೆ. ಅವರು ಪಶ್ಚಿಮ ಘಟ್ಟಗಳ ನಿತ್ಯಹರಿದ್ವರ್ಣ ಕಾಡುಗಳಲ್ಲಿ ಚಾರಣ ಮಾಡುತ್ತಾ ದಾರಿಯಲ್ಲಿ ಸಿಗುವ ಹಳ್ಳಿಗಳಲ್ಲಿ ಉಳಿದುಕೊಳ್ಳುತ್ತಾರೆ. ಈ ಚಾರಣವು ಈ ಭಾಗದ ಅತಿ ಎತ್ತರ ಪ್ರದೇಶವಾದ ಯಾಣ ಮೋತಿಗುಡ್ಡವನ್ನು ಕೂಡ ಒಳಗೊಂಡಿದೆ. ಭೂಪ್ರದೇಶ / ಹವಾಮಾನವು ಈ ಪ್ರದೇಶದ ಜನರ ಬದುಕಿನ ಮೇಲೆ ಬೀರಿರುವ ಪ್ರಭಾವವನ್ನು ಅಧ್ಯಯನಮಾಡುತ್ತಾರೆ. ಸುತ್ತಲ ಪರಿಸರಕ್ಕನುಗುಣವಾಗಿ ತಮ್ಮ ಬದುಕಿನಕ್ರಮವನ್ನು ಸಮುದಾಯಗಳವರು ಕಟ್ಟಿಕೊಳ್ಳುವುದನ್ನು ಅಭ್ಯಸಿಸುತ್ತಾರೆ.

ನದಿ, ಸಮುದ್ರ ಇಲ್ಲವೇ ಕಾಡಿನ ಹಾದಿಯಲ್ಲಿ ನಡೆದು ಸಮೃದ್ಧ ಪರಿಸರ ವೈವಿಧ್ಯವನ್ನು ಪರಿಚಯ ಮಾಡಿಕೊಳ್ಳುವ, ವಿವಿಧ ಬುಡಕಟ್ಟು ಸಮುದಾಯಗಳ ಜನರನ್ನು ಭೇಟಿ ಮಾಡಿ ಅವರ ಬಗ್ಗೆ ತಿಳಿದುಕೊಳ್ಳುವ ಅವಕಾಶವನ್ನು ಕಲ್ಪಿಸಿತು. ವಿದ್ಯಾರ್ಥಿಗಳು ಒಂದು ವಾರದಿಂದ ಒಂದು ತಿಂಗಳವರೆಗೆ ಈ ನದಿಗಳು, ಸಮುದ್ರಗಳು , ಕಾಡಿನ ನಡುವೆಯಿದ್ದು ಬುಡಕಟ್ಟು ಜನರಿಂದ ಅಲ್ಲಿನ ವಿಷಯಗಳನ್ನು ಕಲಿಯುತ್ತಾರೆ (ಹಾಲಕ್ಕಿ ಮತ್ತು ಸಿದ್ಧಿ) (ಚೌಕ 1ನ್ನು ನೋಡಿ). ಈ ಕಾರ್ಯಕ್ರಮದಲ್ಲಿ ಆಕೆ ಬುಡಕಟ್ಟಿನ ಮಂದಿಯೇ ತರಗತಿಗಳನ್ನು ತೆಗೆದುಕೊಳ್ಳುವಂತೆ ಮಾಡಿ ಆ ಶಾಲೆಗಳ ಮಕ್ಕಳಿಗೆ ಜಾನಪದವನ್ನು ಕಲಿಸುವಂತೆ ಮಾಡಿದ್ದಾರೆ. ಅವರ ಈ ಹೆಜ್ಜೆಗೆ ವ್ಯಾಪಕ ಪ್ರಶಂಸೆ ವ್ಯಕ್ತವಾಗಿದೆ.

### ತೋಟದಲ್ಲಿ ಕಲಿಕೆ

ಶಿಕ್ಷಕ ವೃತ್ತಿ ಆಕೆಗೆ ಆತ್ಮತೃಪ್ತಿಯನ್ನು ತಂದುಕೊಡಲಿಲ್ಲ. ಆಕೆಯ ಒಳದನಿ ಮರಳಿ ಮಣ್ಣಿಗೆ ಎಂದು ಹಾಡುತ್ತಿತ್ತು. ಇದೆಲ್ಲ ಶುರುವಾದದ್ದು ಭೂಮಿಯನ್ನುಳಿಸಿ ಎನ್ನುವ ವ್ಯಾಲಿ ಶಾಲೆಯ ಚಟುವಟಿಕೆಯಿಂದ. ಅಲ್ಲಿಂದ ಆಕೆ ತನ್ನ ತೋಟದೆಡೆಗೆ ನಡೆದಳು.

ಸವಿತಾ ಅವರು ಶಿಕ್ಷಣವನ್ನು ಪುನಶ್ಚೇತನಗೊಳಿಸಿ ಮುಂದಿನ ಪೀಳಿಗೆಗಳವರಿಗೂ ಈ ಜ್ಞಾನದ ಲಾಭ ದೊರಕುವಂತೆ ಮಾಡಬೇಕೆಂದು ಬಯಸಿದ್ದಾರೆ. ಆಕೆ ಉತ್ತರ ಕನ್ನಡದ ಪಶ್ಚಿಮ ಘಟ್ಟಗಳಲ್ಲಿ ಗೋಕರ್ಣದಿಂದ 30ಕಿಮೀ ದೂರದಲ್ಲಿ 25 ಎಕರೆ ಭೂಮಿಯನ್ನು ಖರೀದಿ ಮಾಡಿದರು. ಆಕೆಗೆ ಕೃಷಿಯ ಬಗ್ಗೆ ಏನೂ ತಿಳಿದಿರಲಿಲ್ಲ. ಅದಕ್ಕೆ ಮುಂಚೆ ಎಂದೂ ಕೃಷಿಯನ್ನು ಮಾಡಿರಲಿಲ್ಲ. ಆರಂಭದ ಎರಡುವರ್ಷಗಳು ಬಹಳ ಕಷ್ಟಪಟ್ಟರು. ಭೂಮಿಯನ್ನು ತೆಗೆದುಕೊಂಡು ತಪ್ಪುಮಾಡಿಬಿಟ್ಟೆ ಎಂದು ಕೂಡ ಆ ದಿನಗಳಲ್ಲಿ ಯೋಚಿಸಿದ್ದರಂತೆ. ಅವರಂದುಕೊಂಡಂತೆ ಏನೂ ಆಗುತ್ತಿರಲಿಲ್ಲ. ಆಕೆಯ ಗಂಡ ದೂರದ ತಾಂಜೇನಿಯಾದಲ್ಲಿ ಕೆಲಸ ಮಾಡುತ್ತಿದ್ದರು. ಆರಂಭದ ವರ್ಷಗಳಲ್ಲಿ ಅವರಿಗೆ ಎಲ್ಲವೂ ಅಯೋಮಯವಾಗಿತ್ತೆಂದು ಹೇಳುತ್ತಾರೆ.

ತಮ್ಮ ಒಡೆತನದ 25 ಎಕರೆ ಭೂಮಿಯಲ್ಲಿ ಕೃಷಿ ಭೂಮಿಯಲ್ಲಿ (4 ಎಕರೆ) ಭೂಮಿಗೆ ರಾಸಾಯನಿಕವನ್ನು ಬಳಸಲಾಗಿತ್ತು. ಹೈಬ್ರೀಡ್ ಅಕ್ಕಿಯನ್ನು ಅಲ್ಲಿ ಬೆಳೆಯಲಾಯಿತು. ಇದಕ್ಕೆ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕದ ಅವಶ್ಯಕತೆಯಿತ್ತು. ನಂತರ ನಿಧಾನವಾಗಿ ಕಳೆದ ಐದು ವರ್ಷಗಳಿಂದ ಸವಿತಾ ಸಾವಯವ ಕೃಷಿಯ ಕಡೆ ಹೊರಳಿದ್ದಾರೆ. ಮಣ್ಣಿನ ಗುಣಮಟ್ಟವನ್ನು ಹೆಚ್ಚಿಸುವ ಸಲುವಾಗಿ ಸಾವಯವ ಗೊಬ್ಬರವನ್ನು ಬಳಸುತ್ತಿದ್ದಾರೆ.

ಪ್ರಸ್ತುತ ಅವರು ದೇಸಿ ತಳಿಗಳಾದ ರತ್ನಚೂಡ, ಹಾಲಗ ಮತ್ತು ಹೆಗ್ಗೆಯನ್ನು ಬೆಳೆಯುತ್ತಿದ್ದಾರೆ. ಮನೆ ಬಳಕೆಗೆ ಅಗತ್ಯವಿರುವಷ್ಟು ಅಕ್ಕಿಯನ್ನು ಬೆಳೆಯುತ್ತಿದ್ದಾರೆ ಜೊತೆಗೆ ತಮ್ಮ ಸ್ನೇಹಿತರಿಗೂ ಹಂಚುತ್ತಿದ್ದಾರೆ. ವರ್ಷಗಳುರುಳಿದಂತೆ ನಗರಗಳಲ್ಲಿರುವ ಆಕೆಯ ಸ್ನೇಹಿತರು ನಾಟಿ ಸಮಯದಲ್ಲಿ ಆಕೆಗೆ ಸಹಾಯ ಮಾಡುತ್ತಿದ್ದು ಅಲ್ಲಿ ತಂಗಲು ಮತ್ತು ಊಟಕ್ಕೆ ತಗಲುವ ವೆಚ್ಚವನ್ನು ಅವರೇ ಭರಿಸುತ್ತಿದ್ದಾರೆ. ಇದರಿಂದಾಗಿ ಆಕೆಗೆ ತೋಟದ ಚಟುವಟಿಕೆಗಳನ್ನು ನೋಡಿಕೊಳ್ಳಲು ಸ್ವಲ್ಪಮಟ್ಟಿಗೆ ಸಹಾಯವಾಗಿದೆ. ಈ ವ್ಯವಸ್ಥೆಯು ಮುಂದುವರೆದು ಆಗಸ್ಟ್ ತಿಂಗಳಲ್ಲಿ ಎರಡು ದಿನಗಳ ನಾಟಿ / ಗಿಡನೆಡುವ ಉತ್ಸವ ಮುಂಗಾರುವಿನ ಹುಟ್ಟಿಗೆ ಕಾರಣವಾಯಿತು.

**ಸವಿತಾ ಅವರಿಗೆ ವರ್ಷಪೂರ್ತಿ ತೋಟದಲ್ಲಿ ಕೆಲಸವಿರುತ್ತದೆ. ಇದು ಅವರಿಗೆ ಮತ್ತು ಅವರ ತೋಟದಲ್ಲಿ ಕೆಲಸಮಾಡುವ ಸ್ಥಳೀಯ ಸಮುದಾಯದ ಜನರಿಗೆ ಸ್ಥಿರ ಆದಾಯವನ್ನು ಒದಗಿಸುತ್ತಿದೆ.**

ಎಲ್ಲ ಬಗೆಯ ಭತ್ತದ ಹುಲ್ಲು ಆಕೆಯ ಜಾನುವಾರುಗಳಿಗೆ ಮೇವಾಗಿ ಬಳಕೆಯಾಗುತ್ತದೆ. ಆಕೆಯ ಬಳಿ 2 ದನಗಳು, 4 ಹಸುಗಳು ಮತ್ತು 3 ಕರುಗಳಿವೆ. ಜೊತೆಗೆ ಇತ್ತೀಚೆಗೆ ಆಕೆ ಬೆಳೆಯುವ ಮೇವಿಗೂ ಭಾರಿ ಬೇಡಿಕೆಯಿದೆ. ವರ್ಷವಿಡಿ ತೋಟದಲ್ಲಿ ಒಂದಲ್ಲ ಒಂದು ಕೆಲಸವಿದ್ದು ಸುಸ್ಥಿರ ಆದಾಯವನ್ನು ತಂದುಕೊಡುತ್ತಿದೆ. ಇದು ಅವರೆ ತೋಟದಲ್ಲಿ ಕೆಲಸ ಮಾಡುತ್ತಿರುವ ಸ್ಥಳೀಯರಿಗೆ ಕೂಡ ಆರ್ಥಿಕ ಸುಸ್ಥಿರತೆಯನ್ನು ನೀಡಿದೆ. ಈ ರೀತಿ ಆಕೆ ಸ್ಥಳೀಯ ಸಮುದಾಯಗಳ ಆರ್ಥಿಕ ಹಾಗೂ ಜೀವನ ಮಟ್ಟದ ಸುಧಾರಣೆಗೆ ಕಾರಣಳಾಗಿದ್ದಾಳೆ.

### ಕೋಕಂ (ಪುನರ್ಪುಳಿ/ಮುರುಗಲ) ಹಬ್ಬ

ಕೋಕಂ ಭಾರತದಲ್ಲಿ ಬೆಳೆಯುವ ಹಣ್ಣಿನ ಮರ. ಈ ಹಣ್ಣು ಕೆಂಪಗಿದ್ದು ಪೂರ್ತಿ ಮಾಗಿದಾಗ ನೇರಳೆ ಬಣ್ಣಕ್ಕೆ ತಿರುಗುತ್ತದೆ. ಹುಳಿ – ಸಿಹಿ ಮಿಶ್ರಿತ ಸ್ವಾದವನ್ನು ಹೊಂದಿರುತ್ತದೆ. ಕೋಕಂನಲ್ಲಿ ಹಲವು ಔಷಧೀಯ ಗುಣಗಳಿವೆ.

ಕೋಕಂ ಹಬ್ಬವೆನ್ನುವುದು ಕೋಕಂ ಮರದಿಂದ ಜಾಡಿಯೊಳಗೆ ಶೇಖರಗೊಳ್ಳುವರೆಗಿನ ಪಯಣ. ಈ ಸಮಯದಲ್ಲಿ ಮಾಗಿದ ಹಣ್ಣುಗಳನ್ನು ಕಿತ್ತು, ಸಂಸ್ಕರಿಸಿ ಶೇಖರಿಸಿಡಲಾಗುತ್ತದೆ. ಕೋಕುಂಗಳನ್ನು ಕೀಳುವುದರೊಂದಿಗೆ ಇದು ಆರಂಭವಾಗುತ್ತದೆ. ಈ ಹಬ್ಬದಲ್ಲಿ ಭಾಗಿಯಾಗಲು ಬಂದವರು ದೊಡ್ಡ ಬಿದಿರಿನ ಬುಟ್ಟಿಗಳನ್ನು ಹಿಡಿದು ಕಾಡುಮೇಡುಗಳನ್ನು ಅಲೆಯುತ್ತಾ ಈ ಹಣ್ಣಗಳನ್ನು ಕಿತ್ತು ಮನೆಗೆ ತರುತ್ತಾರೆ.

ಮುಂದಿನ ಹಂತವೆಂದರೆ ಕೋಕಂನ ಹೊರ ಭಾಗದ ಸಿಪ್ಪೆಯನ್ನು ಸುಲಿದು ಬೀಜವನ್ನು ಬೇರ್ಪಡಿಸುತ್ತಾರೆ. ಆಮೇಲೆ ಬೀಜದಿಂದ ಬೆಣ್ಣೆ ಮಾಡುತ್ತಾರೆ. ಇದು ಸೌಂದರ್ಯವರ್ಧಕಗಳಾದ ಲಿಪ್‌ಸ್ಟಿಕ್, ಮಾಶ್ಚಿರೈಸಿಂಗ್ ಕ್ರೀಂಗಳು, ಕಂಡೀಷನರ್‌ಗಳು ಮತ್ತು ಸೋಪುಗಳಲ್ಲಿ ಬಳಕೆಯಾಗುವ ಶಿಯಾ ಅಥವ ಕೊಕೊ ಬಟರ್ ಮಾದರಿಯಲ್ಲಿರುತ್ತದೆ. ಇದರ ಒಳತಿರುಳಿಗೆ ಬೆಲ್ಲವನ್ನು ಸೇರಿಸಿ ಜಾಮ್, ಸ್ಕ್ವಾಷ್ ಮತ್ತಿತರ ಉತ್ಪನ್ನಗಳನ್ನು ತಯಾರಿಸುತ್ತಾರೆ.

ಒಣಗಿಸಿದ ಹಣ್ಣಿನ ಸಿಪ್ಪೆಯನ್ನು ಔಷಧಿಯ ಉದ್ದೇಶಗಳಿಗೆ ಬಳಸಲಾಗುತ್ತದೆ. ಇದರ ಬಣ್ಣ ಬಿಸಿಲಿಗೆ ಕಪ್ಪಿನಿಂದ ನೇರಳೆಗೆ ತಿರುಗುತ್ತದೆ. ಕೋಕಂ ಹಣ್ಣುಗಳಿಂದ ಜಾಮ್, ವೈನ್, ಶರಬತ್ತುಗ, ಕೋಕಂ ರಸಂ ಇತ್ಯಾದಿಗಳನ್ನು ತಯಾರಿಸಲಾಗುತ್ತದೆ.

ಕೋಕಂ ಬೀಜಗಳಿಂದ ಬೆಣ್ಣೆಯನ್ನು ಕೂಡ ಹಲವು ವರ್ಷಗಳಿಂದ ಮಾಡುತ್ತಿದ್ದಾರೆ. ಕೋಕಂ ಬೀಜಗಳನ್ನು ಕುದಿಸಿ ಒರಳಿನಲ್ಲಿ ರುಬ್ಬುತ್ತಾರೆ. ಮತ್ತೆ ಅದನ್ನು ಕುದಿಸಿ ಅದರಿಂದ ಬೆಣ್ಣೆಯನ್ನು ತೆಗೆಯುತ್ತಾರೆ. ಇದು ಶಿಯಾ ಅಥವ ಕೊಕೊ ಬಟರ್ ಮಾದರಿಯಲ್ಲಿರುತ್ತದೆ. ಇದನ್ನು ಸಾಮಾನ್ಯವಾಗಿ ಸೌಂದರ್ಯವರ್ಧಕಗಳಾದ ಲಿಪ್‌ಸ್ಟಿಕ್ಸ್, ಮಾಶ್ಚಿರೈಸಿಂಗ್ ಕ್ರೀಂಗಳು, ಕಂಡೀಷನರ್‌ಗಳು ಮತ್ತು ಸೋಪುಗಳಲ್ಲಿ ಬಳಸುತ್ತಾರೆ.



ಹಣ್ಣುಗಳಿಂದ ತೆಗೆದ ಕೋಕಂ ಬಟರ್ ಸೌಂದರ್ಯವರ್ಧಕ ಕೈಗಾರಿಕೆಗಳಲ್ಲಿ ಬಳಸುತ್ತಾರೆ

ಸವಿತಾ ಅಂಗಡಿಬೈಲಿನಲ್ಲಿ ಸಾಂಪ್ರದಾಯಿಕ ಶೈಲಿಯಲ್ಲಿ ಫಾರಂ ಹೌಸ್ ನಿರ್ಮಿಸಿದ್ದಾರೆ. ಜನ ಇಲ್ಲಿ ತಂಗಬಹುದು ಹಾಗೂ ಸ್ವಯಂಪ್ರೇರಿತರಾಗಿ ತೋಟದ ಕೆಲಸಗಳಲ್ಲಿ ತೊಡಗಿಕೊಳ್ಳಬಹುದು. ಬುಡ ಹೊನ್ನಾವರದಲ್ಲಿರುವ ಕೇಂದ್ರದಂತೆಯೇ ಅಧ್ಯಯನ ಕೇಂದ್ರವಾಗಿ ರೂಪುಗೊಂಡಿದೆ. ಈ ಸುಂದರ ಪ್ರಯೋಗಶೀಲ ಕಲಿಕೆಯ ಕಾರ್ಯಕ್ರಮಕ್ಕೆ ಒಮ್ಮೆಗೆ 15 ಮಂದಿಯನ್ನು ಮಾತ್ರ ತೆಗೆದುಕೊಳ್ಳಲಾಗುತ್ತದೆ. ಇವರಿಗೆ ಮರೆವೆಗೆ ಸಂದಿರುವ ಬುಡಕಟ್ಟು ಸಮುದಾಯಗಳ ಆಹಾರ ಮತ್ತು ಕಲೆಯನ್ನು ಪರಿಚಯಿಸಲಾಗುತ್ತದೆ. ಸ್ಥಳೀಯ ಜನರಾದ ಹಾಲಕ್ಕಿ ಮತ್ತು ಸಿದ್ಧಿಗಳನ್ನು ಕತೆ ಹೇಳಲು, ಹಾಡಲು ಮತ್ತು ಇತರ ಕೆಲಸಗಳಿಗೆ ನೆರವು ನೀಡಲು ಆಹ್ವಾನಿಸಲಾಗುತ್ತದೆ. ಇದರಿಂದ ಅವರಿಗೂ ಆದಾಯ ಸೃಷ್ಟಿಯಾಗುತ್ತದೆ.

## ಮರೆತ ತಿನಿಸುಗಳ ಪುನಶ್ಚೇತನ

ಅವರು ವಿವಿಧ ಕಾಲಗಳಲ್ಲಿ ವಿವಿಧ ಹಬ್ಬಗಳನ್ನು ಆಯೋಜಿಸುತ್ತಾರೆ. ಇವೆಲ್ಲವೂ ಆಹಾರ ವೈವಿಧ್ಯ, ಸಾಂಪ್ರದಾಯಿಕ ವಿಧಾನದಲ್ಲಿ ಮಾಡುವ ಅಡುಗೆ, ಮರೆತ ತಿನಿಸುಗಳು, ಹಸಿರು ತರಕಾರಿ ಮೊದಲಾದವನ್ನು ಬಳಸಿ ಮಾಡುವ ಅಡುಗೆಯ ವೈವಿಧ್ಯವನ್ನು ಇಲ್ಲಿ ಪರಿಚಯಿಸಲಾಗುತ್ತದೆ. ಈ ಹಬ್ಬಗಳು ವೈವಿಧ್ಯತೆಯೇ ಆಹಾರ ಭದ್ರತೆಯ ಕೀಲಿ ಕೈ ಎನ್ನುವುದಕ್ಕೆ ಪ್ರಾಮುಖ್ಯತೆ ನೀಡುತ್ತದೆ. ಈ

ಕೋಕಂ ಹಬ್ಬದ ಸಮಯದಲ್ಲಿ ಹತ್ತಿರದ ಕಾಡುಗಳಿಂದ ಕೋಕಂ ಸಂಗ್ರಹಿಸಲಾಗುತ್ತದೆ



ಹಬ್ಬಗಳು ವೈವಿಧ್ಯಮಯ ಆಹಾರಕ್ರಮಗಳು ಮತ್ತು ನಮ್ಮ ಆಹಾರ ಪದ್ಧತಿಯಲ್ಲಿರಬೇಕಾದ ವೈವಿಧ್ಯತೆಯು ಉತ್ತಮ ಆರೋಗ್ಯ ಮತ್ತು ಪೌಷ್ಟಿಕಾಂಶಕ್ಕೆ ಹೇಗೆ ಮುಖ್ಯ ಎನ್ನುವುದನ್ನು ನಗರದ ಮಂದಿಗೆ ತಿಳಿಸಿಕೊಡುತ್ತವೆ. ಒಂದೇ ತಿಂಡಿಯನ್ನು ಹಲವು ರೀತಿಗಳಲ್ಲಿ ಮಾಡಬಹುದು ಎನ್ನುವುದನ್ನು ಇಲ್ಲಿ ಕಲಿಯಬಹುದಾಗಿದೆ. ಕೋಕಂನ ಹಲವು ಸಾಧ್ಯತೆಗಳ ಬಗ್ಗೆ ನಿಮಗೆ ತಿಳಿದಿತ್ತೇ? ಬುಡ ಕೋಕಂ ಹಬ್ಬವನ್ನು ಬೇಸಿಗೆಯಲ್ಲಿ (ಮೇ), ಬೆಲ್ಲದ ಹಬ್ಬವನು ಚಳಿಗಾಲದಲ್ಲಿ (ಫೆಬ್ರವರಿ) ಮತ್ತು ಮುಂಗಾರು ಹಬ್ಬವನ್ನು (ಭತ್ತದ ನಾಟಿ) ಮಳೆಗಾಲದಲ್ಲಿ (ಆಗಸ್ಟ್) ಆಯೋಜಿಸುತ್ತದೆ.

ಬಹಳ ಸಮಯದವರೆಗೆ ಸವಿತಾ ತನ್ನ ಉತ್ಪನ್ನಗಳನ್ನು ಮಾರಾಟ ಮಾಡಿರಲಿಲ್ಲ. ಆದರೆ ಆಕೆಯ ಉತ್ಪನ್ನಗಳ ಗುಣಮಟ್ಟದ ಬಗ್ಗೆ ಪ್ರಶಂಸೆ ವ್ಯಕ್ತವಾಗಿ ಜನಪ್ರಿಯತೆ ಹೆಚ್ಚಾದಂತೆ ಬೇಡಿಕೆಯ ಮಹಾಪೂರ ಹರಿಯಲಾರಂಭಿಸಿತು. ಆಕೆ ತನ್ನ ಉತ್ಪನ್ನಗಳನ್ನು ಬೆಂಗಳೂರಿನ ರಾಗಿಕಣದಲ್ಲಿ ಮಾರಾಟವಮಾಡುತ್ತಾರೆ. ಆಕೆಯ ಉತ್ಪನ್ನಗಳು ನಗರಗಳಲ್ಲಿ ಮಾರಾಟವಾದರೂ ಕೂಡ ಆಕೆಗೆ ತನ್ನ ಉತ್ಪನ್ನಗಳ ಮಾರಾಟದೊಂದಿಗೆ ಅದರ ಹಿಂದಿನ ಕತೆಯನ್ನು ಗ್ರಾಹಕರೊಂದಿಗೆ ಹಂಚಿಕೊಳ್ಳುವ ಅವಕಾಶ ನೀಡುವ ಸಂಸ್ಥೆಗಳೊಂದಿಗೆ ಕೆಲಸ ಮಾಡುವುದು ಇಷ್ಟವಾಗುತ್ತದೆ.

ಸವಿತಾ ತರಹದ ವ್ಯಕ್ತಿಗಳು ಅನುಸರಿಸುತ್ತಿರುವ ಹಾದಿ ಮೆಚ್ಚುಗೆಗೆ ಅರ್ಹವಾದುದು ಅಲ್ಲವೆ? ಅವರು ತಮ್ಮ ಹೃದಯದ ಮಾತುಗಳನ್ನಾಡುತ್ತಾರೆ. ತಮ್ಮ ಉತ್ಪನ್ನಗಳಿಗೆ ಬ್ರಾಂಡ್ ಹಣೆಪಟ್ಟಿ ಹಚ್ಚುವುದನ್ನು ಒಪ್ಪುವುದಿಲ್ಲ. ಜನರು ತಾವಾಗಿ ಈ ಸ್ಥಳಗಳಿಗೆ ಭೇಟಿ ನೀಡಿ ಹಬ್ಬಗಳಲ್ಲಿ ಭಾಗಿಯಾಗಿ ನೆನಪುಗಳ ಮೂಟೆ ಹೊತ್ತು, ಮರೆತ ಅಡುಗೆಗಳ ಸ್ವಾದವನ್ನು ಸವಿದು ಖುಷಿಯಿಂದ ಹೋದರೆ ಅದಕ್ಕಿಂತ ಹೆಚ್ಚಿನದೇನು ಬೇಕು? ಅವರ ಸ್ಥಳಕ್ಕೆ ಭೇಟಿನೀಡುವುದು ನಿಜಕ್ಕೂ ಅದ್ಭುತ ಅನುಭವವನ್ನು ನೀಡುತ್ತದೆ. ಅಲ್ಲಿನ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಅವರ ಕಾರ್ಯಕ್ಕೆ ಮನ್ನಣೆ ನೀಡಿ ಕಲಿತು ಬರುವುದು ಅವಿಸ್ಮರಣೀಯ ಅನುಭವವನ್ನು ನೀಡುತ್ತದೆ.

◆

**Lakhmi Unnithan**
Editor,
Agriculture World,
206, Narmada Apartments,
Near Don Bosco School, Alaknanda,
New Delhi 110019.
E-mail: dr.lakshmi@live.in

**ಆಂಗ್ಲ ಮೂಲ :**
ಲೀಸಾ ಇಂಡಿಯಾ, ಸಂಪುಟ 21, ಸಂಚಿಕೆ 3, ಸೆಪ್ಟೆಂಬರ್ 2019.

# ರೈತನ ಡೈರಿ

## ಸುಸ್ಥಿರ ಕೃಷಿ ಮಾರ್ಗ



ಶ್ರೀ ಮಲ್ಲಿಕಾರ್ಜುನ ಪಾಟೀಲರು ಕರ್ನಾಟಕದ ಧಾರವಾಡ ಜಿಲ್ಲೆಯ ಕಲ್ಲಘಟ್ಟಿ ತಾಲ್ಲೂಕಿನ ಮುಕ್ಕಾಲು ಹಳ್ಳಿಗೆ ಸೇರಿದವರು. ದೇಶದ ಬಹುತೇಕ ರೈತರು ಕೃಷಿಯಲ್ಲಿ ಆದಾಯವಿಲ್ಲ ಎಂದು ಅದನ್ನು ತೊರೆಯುತ್ತಿರುವಾಗ ಪಾಟೀಲರು ಇವರ ನಡುವೆ ವಿಭಿನ್ನರಾಗಿ ನಿಲ್ಲುತ್ತಾರೆ. ಕೃಷಿಯಿಂದ ಸುಸ್ಥಿರ ಆದಾಯವನ್ನು ಗಳಿಸಬಹುದು ಎಂದು ಸಾಧಿಸಿ ತೋರಿಸಿ ಯುವಜನಾಂಗವು ಕೃಷಿಯಲ್ಲಿ ತೊಡಗಿಕೊಳ್ಳುವುದಕ್ಕೆ ಮಾದರಿಯಾಗಿದ್ದಾರೆ. ಸುಸ್ಥಿರವಾದ ನೈಸರ್ಗಿಕ ಕೃಷಿ ವಿಧಾನಗಳನ್ನು ಅಳವಡಿಸಿಕೊಂಡು ರಾಸಾಯನಿಕಗಳನ್ನು ಬಳಸದೆ ಮಲ್ಲಿಕಾರ್ಜುನ ಪಾಟೀಲರು ಮಣ್ಣಿನ ಆರೋಗ್ಯವನ್ನು ಕಾಪಾಡಿಕೊಂಡು ಉತ್ತಮ ಇಳುವರಿಯನ್ನು ಪಡೆಯುತ್ತಿದ್ದಾರೆ.

ಶ್ರೀ ಪಾಟೀಲರು ಸಜ್ಜೆ, ರಾಗಿ ಮತ್ತು ನವಣೆಯನ್ನು ಬೆಳೆಯುತ್ತಿದ್ದಾರೆ. ಇದರೊಂದಿಗೆ ಉದ್ದು, ಅಲಸಂದೆ, ಸೋಯಾಬೀನ್ ಇತ್ಯಾದಿಗಳನ್ನು ಬೆಳೆಯುತ್ತಿದ್ದಾರೆ. ಇಂದಿಗೂ ಇವುಗಳ ಬೀಜವನ್ನು ಕೇಳಿದ ರೈತರಿಗೆ ಒದಗಿಸುತ್ತಿದ್ದಾರೆ. ಅವರ ಬಳಿ ಮೂರು ಹಸುಗಳಿವೆ. ಹತ್ತು ಗುಂಟೆ ಭೂಮಿಯಲ್ಲಿ ಇವುಗಳಿಗಾಗಿ ಮೇವನ್ನು ಬೆಳೆಯುತ್ತಿದ್ದಾರೆ. ಪ್ರತಿವಾರ ಸುಮಾರು 225 ಲೀಟರ್‌ನಷ್ಟು ಹಾಲನ್ನು ಮಾರಾಟ ಮಾಡುತ್ತಿದ್ದಾರೆ.

ಇದರೊಂದಿಗೆ ಹಿತ್ತಲಲ್ಲಿ ಗಿರಿರಾಜ ಕೋಳಿ ಮತ್ತು ದೇಸಿ ಕೋಳಿಗಳ ಸಾಕಾಣಿಕೆ ಮಾಡುತ್ತಿದ್ದಾರೆ. ಇವುಗಳಿಂದ ಮಾಸಿಕ ರೂ.5,000 ಗಳಿಸುತ್ತಿದ್ದಾರೆ.

ಪ್ರತಿ ಹೆಕ್ಟೇರಿಗೆ 24 ಕ್ವಿಂಟಾಲ್ ಜೋಳವನ್ನು ಬೆಳೆಯುವ ಮೂಲಕ ತಾಲ್ಲೂಕಿನಲ್ಲಿ ಅತಿಹೆಚ್ಚು ಜೋಳ ಬೆಳೆದ ದಾಖಲೆಯನ್ನು ಮಾಡಿದ್ದಾರೆ. ಅದೇ ರೀತಿ ಒಂದು ಎಕರೆಗೆ 38 ಕ್ವಿಂಟಾಲ್ ಭತ್ತ ಬೆಳೆದು ದಾಖಲೆ ನಿರ್ಮಿಸಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಪಾಟೀಲರು ತಮ್ಮ ಶ್ರಮಕ್ಕೆ ಹಲವು ಪುರಸ್ಕಾರಗಳನ್ನು ಪಡೆದಿದ್ದಾರೆ. 2014–15ರಲ್ಲಿ ತಾಲ್ಲೂಕು ಮಟ್ಟದಲ್ಲಿ ಅತ್ಯುತ್ತಮ ಕೃಷಿಕ ಪ್ರಶಸ್ತಿ ಪಡೆದಿದ್ದಾರೆ. 2017ರಲ್ಲಿ ಶ್ರೀ ಸಿದ್ಧರೂಢ ರಾಜ್ಯ ಪ್ರಶಸ್ತಿ ಪಡೆದವರಲ್ಲಿ ಇವರು ಕೂಡ ಸೇರಿದ್ದಾರೆ.

ಶ್ರೀ ಪಾಟೀಲರು ಕುಟುಂಬವು ಮಣ್ಣನ್ನು ನಂಬಿ ಹಾಳಾದವರಿಲ್ಲ ಎಂಬ ಬಗ್ಗೆ ಅಚಲವಿಶ್ವಾಸವನ್ನು ಹೊಂದಿದ್ದಾರೆ. ಕೃಷಿಯ ಬಗೆಗಿನ ಅವರ ಈ ನಂಬಿಕೆಗೆ ಸಾಕ್ಷಿಯಾಗಿ ಅವರ ಮಕ್ಕಳಿಬ್ಬರೂ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಶ್ರೀ ಪಾಟೀಲರು ತಮ್ಮೆಲ್ಲ ಯಶಸ್ಸಿನ ಶ್ರೇಯ ತಮ್ಮೊಂದಿಗೆ ಈ ಪಯಣದಲ್ಲಿ ಜೊತೆಯಾಗಿ ನಿಂತಿರುವ ತಮ್ಮ ಪತ್ನಿಗೆ ಸಲ್ಲಬೇಕೆಂದು ಹೇಳುತ್ತಾರೆ.

◆

**ಆಂಗ್ಲ ಮೂಲ :**
ಲೀಸಾ ಇಂಡಿಯಾ, ಸಂಪುಟ 21, ಸಂಚಿಕೆ 3, ಸೆಪ್ಟಂಬರ್ 2019.

# ಭಾರತದಲ್ಲಿನ ಕೃಷಿವಿಜ್ಞಾನಕ್ಕೆ ಶಕ್ತಿ ತುಂಬಿದ ಮಹಿಳೆಯರ ಗುಂಪು

### ಸೌಮ್ಯ ಶಂಕರ್ ಬೋಸ್ ಮತ್ತು ಅಮೃತ ಗುಪ್ತಾ ಅವರ ಫೋಟೋಸ್ಟೋರಿ

"ನಮಗೆ ದೇಸಿ ತಳಿಗಳ ಬೀಜಗಳನ್ನು ಸಂರಕ್ಷಿಸಿ ಸಾಂಪ್ರದಾಯಿಕ ಕೃಷಿಜ್ಞಾನವನ್ನು ಪಸರಿಸುವುದರ ಮಹತ್ವ ಗೊತ್ತಿತ್ತು. ಈ ಕೃಷಿಪರಿಸರ ವಿಜ್ಞಾನವು ಪರಿಸರಕ್ಕೆ ಹಾನಿ ಮಾಡುವುದಿಲ್ಲವೆಂದು ಕೂಡ ತಿಳಿದಿತ್ತು" ಎಂದು ಚುಕ್ಕಿ ನಂಜುಂಡಸ್ವಾಮಿಯವರು ಹೇಳುತ್ತಾರೆ. ಇವರು ಕರ್ನಾಟಕದ ಬೆಂಗಳೂರಿನ ಅಮೃತ ಭೂಮಿಯ ಸಂಚಾಲಕಿ. ಇದೊಂದು ಕೃಷಿಪರಿಸರ ವಿಜ್ಞಾನ ಸಂಸ್ಥೆ. ಬದಲಿ ಕೃಷಿ ಮಾದರಿಯನ್ನು ಅನುಸರಿಸಬಹುದು ಎನ್ನುವುದನ್ನು ಸಾಬೀತು ಪಡಿಸಲು ಈ ಸಂಸ್ಥೆಯನ್ನು ಕಟ್ಟಲಾಯಿತು. ಲಾ ವಯಾ ಕ್ಯಾಂಪೆಸಿನಾದ ಸದಸ್ಯತ್ವವನ್ನು ಪಡೆದಿರುವ ಈ ಸಂಸ್ಥೆಯು ರೈತರೊಂದಿಗೆ ಮುಖಾಮುಖಿ ಭೇಟಿ ತರಬೇತಿಯನ್ನು ನೀಡುತ್ತದೆ. ಕೃಷಿಪರಿಸರ ವಿಜ್ಞಾನ, ರೈತರ ಹಕ್ಕುಗಳು, ಆಹಾರ ಸಾರ್ವಭೌಮತ್ವ ಮತ್ತು ಸಾಮಾಜಿಕ ನ್ಯಾಯ ಇವೆಲ್ಲವುಗಳ ಕುರಿತು ಕೂಡ ತಿಳಿವಳಿಕೆ ನೀಡುತ್ತದೆ.

ವಾಣೀಜ್ಯೀಕರಣ ಮತ್ತು ಕೈಗಾರಿಕರಣಕ್ಕೆ ತುತ್ತಾಗಿರುವ ಕೃಷಿಯಿಂದ ಮಹಿಳಾ ಕೃಷಿಕರು ಕಣ್ಮರೆಯಾಗುತ್ತಿದ್ದಾರೆ. ಭಾರತವು ಇದಕ್ಕೆ ಹೊರತಲ್ಲ. ಭಾರತದ ಶೂನ್ಯಬಂಡವಾಳದ ನೈಸರ್ಗಿಕ ಕೃಷಿ ಪದ್ಧತಿಗಳು ಇದನ್ನು ಬದಲಾಯಿಸಿವೆ (ಸಮುದಾಯ ನಿರ್ವಹಣೆಯ ನೈಸರ್ಗಿಕ ಕೃಷಿ ಎಂದು ಹೇಳಲಾಗುತ್ತದೆ). ಇದನ್ನು ಮಿಲಿಯನ್‌ಗಟ್ಟಲೇ ಸಣ್ಣರೈತರು ಅಳವಡಿಸಿಕೊಂಡಿದ್ದಾರೆ. ಸಾಲ, ಭೂಮಿ ಅಥವ ವಾಣಿಜ್ಯ ಬೀಜಗಳು ಇವೆಲ್ಲ ಮಹಿಳೆಯರಿಗೆ ಸಿಗುವುದು ಕಷ್ಟ. ಆದರೆ ನೈಸರ್ಗಿಕ ಕೃಷಿಯಿಂದ ಇಂದು ಅವರು ಸಬಲ ಕೃಷಿಕರಾಗಿದ್ದಾರೆ.

ತಮ್ಮ ಸಮುದಾಯಗಳ ನಡುವಿನ ಸಂಪರ್ಕ ಮತ್ತು ಸ್ವಸಹಾಯ ಸಂಘಗಳ ನೆರವಿನಿಂದ ಅವರು ಕೃಷಿಪರಿಸರವಿಜ್ಞಾನವನ್ನು ಹಳ್ಳಿಯಿಂದ ಹಳ್ಳಿಗೆ ಪಸರಿಸುತ್ತಿದ್ದಾರೆ. ಇದರಿಂದ ಕುಟುಂಬದ ಪೌಷ್ಟಿಕತೆ, ಆದಾಯ ಮತ್ತು ಮಣ್ಣಿನ ಆರೋಗ್ಯ ಉತ್ತಮಗೊಳ್ಳುವುದರ ಜೊತೆಗೆ ಸಮಾಜದಲ್ಲಿ ಅವರ ಕುರಿತು ಗೌರವ ಕೂಡ ಹೆಚ್ಚಾಗಿದೆ. ಅವರ ಪದ್ಧತಿಗಳಲ್ಲಿ ಸ್ತ್ರೀವಾದಿ ತರ್ಕವು ಸಾಂಪ್ರದಾಯಿಕ ಮಾರುಕಟ್ಟೆ ಲೆಕ್ಕಾಚಾರಗಳನ್ನು ಬದಲುಮಾಡಿದೆ. ಇದು ರಾಜಕೀಯ ಕರ್ಷಣ ಮತ್ತು ವಿವಾದಗಳಿಗೆ ಕೂಡ ಎಡೆಮಾಡಿಕೊಟ್ಟಿದೆ.

ಆಂಧ್ರಪ್ರದೇಶದಲ್ಲಿ ಮಹಿಳಾ ಸ್ವಸಹಾಯ ಸಂಘಗಳು ಕೃಷಿಪರಿಸರವಿಜ್ಞಾನದ ತತ್ವಗಳನ್ನು ಹಳ್ಳಿಯಿಂದ ಹಳ್ಳಿಗೆ ಪಸರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವು. ತಳಮಟ್ಟದಿಂದ ಬೆಳೆದ ಈ ಮಹಿಳಾ ಕೃಷಿಕರ ಚಳುವಳಿ ಇಲ್ಲದೇ ಹೋಗಿದ್ದಲ್ಲಿ ಈ ಪದ್ಧತಿಗಳನ್ನು ಇಷ್ಟು ತ್ವರಿತ ಗತಿಯಲ್ಲಿ ಹರಡುವುದು ಸಾಧ್ಯವಾಗುತ್ತಿರಲಿಲ್ಲ. ಇಂದು ಇದನ್ನು



ತಮ್ಮ ಸಮುದಾಯಗಳ ಸಂಪರ್ಕ ಮತ್ತು ಸ್ವಸಹಾಯ ಸಂಘಗಳ ನೆರವಿನಿಂದ ಮಹಿಳೆಯರು ಕೃಷಿವಿಜ್ಞಾನವನ್ನು ಹಳ್ಳಿಯಿಂದ ಹಳ್ಳಿಗೆ ಪಸರಿಸುತ್ತಿದ್ದಾರೆ.

600,000 ಮಂದಿ ಕೃಷಿಕರಿಗೆ ತಲುಪಿಸಲಾಗಿದೆ. ಈ ದಶಕದ ಕೊನೆಯ ವೇಳೆಗೆ ಇದನ್ನು 6 ಮಿಲಿಯನ್ ರೈತರಿಗೆ ತಲುಪಿಸುವ ಉದ್ದೇಶವಿದೆ. ಈ ಕಾರ್ಯಕ್ರಮದ ಬಹುತೇಕ ಸಿಬ್ಬಂದಿಗಳು ಮತ್ತು ತರಬೇತಿದಾರರು ಮಹಿಳಾ ಕೃಷಿಕರು.

ಅನಂತಪುರದಲ್ಲಿ ಭೂಮಿಯಿಲ್ಲದ ಹಲವಾರು ಮಂದಿ ಮಹಿಳಾ ಕೃಷಿಕರಿದ್ದಾರೆ. ಅವರಲ್ಲಿ ಕೆಲವರು ಆತ್ಮಹತ್ಯೆ ಮಾಡಿಕೊಂಡ ರೈತರ ಹೆಂಡತಿಯರು. ಮತ್ತೆ ಕೆಲವರು ಮಾನವಸಾಗಾಣಿಕೆಯ ಜಾಲದಿಂದ ಬಿಡಿಸಿಕೊಂಡು ಬಂದವರು. ಇವರೆಲ್ಲರೂ ಜಾತಿತಾರತಮ್ಯಕ್ಕೆ ಒಳಗಾದವರು. ಅವರಲ್ಲೊಂದು ಗುಂಪು ಒಟ್ಟಾಗಿ ಬೀಳು ಬಿದ್ದ ಭೂಮಿಯನ್ನು ವಾಯಿದೆಯ ಅವಧಿಗೆ ತೆಗೆದುಕೊಳ್ಳಲು ಮುಂದಾದರು. ಈ ಮಹಿಳೆಯರು ತಮ್ಮ ಕೌಶಲಗಳನ್ನು,

ತಿಳಿವಳಿಕೆಯನ್ನು, ಶ್ರಮವನ್ನು ತಮ್ಮಲ್ಲೇ ಹಂಚಿಕೊಂಡು ರಾಸಾಯನಿಕ ಮುಕ್ತ ಆಹಾರವನ್ನು ತಮ್ಮ ಕುಟುಂಬಗಳಿಗಾಗಿ ಬೆಳೆದುಕೊಳ್ಳುತ್ತಿದ್ದಾರೆ. ತಮ್ಮ ಬಳಕೆಗೆ ಆಗಿ ಉಳಿದದ್ದನ್ನು ಕೃಷಿ ಮಾರುಕಟ್ಟೆಯಲ್ಲಿ ಮಾರುತ್ತಿದ್ದಾರೆ. ತರಕಾರಿಗಳನ್ನು ಸೈಕಲ್‌ಗಳ ಮೂಲಕ ಗ್ರಾಹಕರ ಮನೆ ಬಾಗಿಲಿಗೆ ತಲುಪಿಸುತ್ತಿದ್ದಾರೆ. ಈ ಪುಟ್ಟ ಉದ್ಯಮವು ಬೆಳೆದು ದೊಡ್ಡದಾಗುವುದನ್ನೇ ಕಾಯುತ್ತಿದ್ದಾರೆ. ಮಹಿಳೆಯರು ಕೃಷಿ ಕೆಲಸ ಮಾಡಲು ಒಟ್ಟಾಗಿ ರೋಟಾ ಸಿಸ್ಟಂ ಅನ್ನು ಅನುಸರಿಸುತ್ತಿದ್ದಾರೆ. ಈ ವಿಧಾನದ ಮೂಲಕ ಅವರು ಉತ್ಪಾದನೆ ಮತ್ತು ಮನೆಯ ಜವಾಬ್ದಾರಿ ನಿರ್ವಹಣೆ ಎರಡೂ ಸಾಧ್ಯವಾಗುತ್ತಿದೆ. ಇಲ್ಲಿ ಸ್ತ್ರೀವಾದಿ ತರ್ಕವು ಸಾಂಪ್ರದಾಯಿಕ ಮಾರುಕಟ್ಟೆ ಲೆಕ್ಕಾಚಾರಗಳನ್ನು ಬುಡಮೇಲು ಮಾಡಿದೆ. ಈ ಮಹಿಳೆಯರು ಕೃಷಿಯ ಸಮಯದಲ್ಲಿ ಒಬ್ಬರಿಗೊಬ್ಬರು ಅರ್ಧವೇತನವನ್ನು ಕೊಡುತ್ತಾರೆ. ಇದರಿಂದ ಕೊಯ್ಲಿಗೆ ಮುನ್ನ ಕುಟುಂಬದ ಅಗತ್ಯಗಳನ್ನು ಪೂರೈಸಲು ಹಣಕ್ಕೆ ಅಡಚಣೆಯಾಗುವುದಿಲ್ಲ. ಮುಂದುವರೆದ ಆರ್ಥಿಕ ವ್ಯವಸ್ಥೆಗಿಂತಲೂ ಕೃಷಿಪರಿಸರವಿಜ್ಞಾನವು ಆಹಾರ ಸಾರ್ವಭೌಮತ್ವ, ಸ್ವಾವಲಂಬನೆ ಮತ್ತು ಆತ್ಮಗೌರವವನ್ನು ಗಳಿಸಿಕೊಡುವುದರಲ್ಲಿ ಮುಖ್ಯ ಪಾತ್ರವನ್ನು ವಹಿಸಿದೆ.

ಕರ್ನಾಟಕದ ಗೊಟ್ಟಿಗೆಹಳ್ಳಿಯ ಸುಜಾತ ಮತ್ತು ಆಕೆಯ ಗಂಡ ಜಗದೀಶ್ ತಮ್ಮ 4 ಎಕರೆ ಜಮೀನಿನಲ್ಲಿ ಕಳೆದ ಹತ್ತು ವರ್ಷಗಳಿಂದ ನೈಸರ್ಗಿಕ ಕೃಷಿಯನ್ನು ಮಾಡುತ್ತಿದ್ದಾರೆ. ರಾಸಾಯನಿಕ ಕೃಷಿಯಿಂದ ಇದಕ್ಕೆ ಬದಲಾಗುವುದು ಕಷ್ಟವಾಗಿತ್ತು ಎನ್ನುತ್ತಾರೆ ಸುಜಾತ. ಆದರೆ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳು ಉಂಟುಮಾಡುವ ಆರೋಗ್ಯದ ಸಮಸ್ಯೆಗಳ ಅರಿವಾದ ಮೇಲೆ ಅವರು ಈ ಬದಲಾವಣೆಗೆ ಮುಂದಾದರು. ಅವರು ತಮ್ಮ ಜಮೀನಿನಲ್ಲಿ ಐದು ಹಂತದ ಮಾದರಿಯ ನೈಸರ್ಗಿಕ ಕೃಷಿಯನ್ನು ಮಾಡುತ್ತಿದ್ದಾರೆ. ಪರಿಸರದಲ್ಲಿ ತೋಟಕ್ಕಿಂತ ಕಾಡೇ ಹೆಚ್ಚಿರುವುದು. "ನಮ್ಮಲ್ಲಿ 200ಕ್ಕೂ ಹೆಚ್ಚು ವಿಧದ ಮರಗಳಿವೆ" ಎಂದು ಜಗದೀಶ್ ಹೇಳುತ್ತಾರೆ.



**ಕುಟುಂಬಕ್ಕೆ ಪೌಷ್ಟಿಕಾಂಶಯುಕ್ತ ಆಹಾರ, ಆದಾಯ ಒದಗಿಸುವಲ್ಲಿ ಮತ್ತು ಮಣ್ಣಿನ ಆರೋಗ್ಯ ಕಾಪಾಡುವಲ್ಲಿ ಮಹಿಳೆಯರು ಮುಖ್ಯ ಪಾತ್ರ ವಹಿಸುತ್ತಿದ್ದಾರೆ.**

ಬಾಳೆ, ಹಲಸು, ತೆಂಗು, ಸೀಬೆ, ಗೆಣಸು, ದ್ವಿದಳ ಧಾನ್ಯಗಳು ಮತ್ತು ನಿಂಬೆಹಣ್ಣನ್ನು ಬೆಳೆಯುತ್ತಿದ್ದಾರೆ. ತಮ್ಮ ಜಮೀನಿನ ತಗ್ಗು ಪ್ರದೇಶದಲ್ಲಿ ಪ್ರಾಯೋಗಿಕವಾಗಿ ಕಾಫಿ ಕೂಡ ಬೆಳೆಯುತ್ತಿದ್ದಾರೆ. ಕೋಳಿಗಳು ಮತ್ತು ಮೇಕೆಗಳು ಸಾಕಷ್ಟಿವೆ. ಎತ್ತರದ ಮರಗಳಾದ ಸ್ವಿಲರ್ ಓಕ್ ಮತ್ತು ನುಗ್ಗೆ ನೈಸರ್ಗಿಕ ಬೇಲಿಯನ್ನು ರೂಪಿಸಿದೆ. ಈ ಮರಗಳು ಎಲೆಗಳನ್ನು

**ಅನಂತಪುರದಲ್ಲಿನ ಮಹಿಳೆಯರ ಸ್ವಸಹಾಯ ಸಂಘದ ಗುಂಪು**



ಉದುರಿಸಿದಾಗ ಅವು ಪಾತಿಗಳಿಗೆ ಹೊದಿಕೆಯಾಗಿ ಮಣ್ಣಿನ ತೇವಾಂಶವನ್ನು ಕಾಪಾಡುತ್ತಿದೆ.

ನಿಸರ್ಗ ಸಾವಯುವ ಕೃಷಿಕರ ಸಂಘವು ಕರ್ನಾಟಕದ ಹೊನ್ನೂರಿನಲ್ಲಿರುವ ಸ್ವಸಹಾಯ ಸಂಘ. ಇದರ ಎಲ್ಲ ಸದಸ್ಯರು ವರ್ಗ ಮತ್ತು ಜಾತಿ ಅಸಮಾನತೆಯನ್ನು ಬದಿಗಿರಿಸಿ ಒಟ್ಟಾಗಿ ನೈಸರ್ಗಿಕ ಕೃಷಿಯಲ್ಲಿ ತೊಡಗಿಕೊಂಡಿದ್ದಾರೆ. ಈ ಶೂನ್ಯ ಬಂಡವಾಳ ನೈಸರ್ಗಿಕ ಕೃಷಿಯು ಜನಪ್ರಿಯವಾಗಿದ್ದು ರಾಜಕೀಯ ಸವಾಲುಗಳನ್ನು ಮತ್ತು ವಿವಾದಗಳನ್ನು ತಂದೊಡ್ಡಿದೆ. ಈ ಮಾದರಿಯಲ್ಲಿ ಸಗಣಿ ಗೊಬ್ಬರ ಮತ್ತು ಗಂಜಲವನ್ನು ಮಣ್ಣಿನಲ್ಲಿನ ಜೀವಾಣುಗಳ ಹೆಚ್ಚಳಕ್ಕೆ ಬಳಸಲಾಗುತ್ತದೆ. ಇಲ್ಲಿ ಎದುರಾಗಿರುವ ಪ್ರಮುಖ ಸವಾಲೆಂದರೆ ಉಗ್ರ ಹಿಂದುತ್ವವಾದಿಗಳು ಗೋವು ಪವಿತ್ರ ಅದರ ಹತ್ಯೆ ಮಾಡಬಾರದು ಎಂದು ಪ್ರತಿಪಾದಿಸುವವರು ಈ ಪದ್ಧತಿಗಳತ್ತ ಬೊಟ್ಟುಮಾಡಿ ಅದಕ್ಕೆ ರಾಜಕೀಯದ ಬಣ್ಣ ಬಳಿಯುತ್ತಿದ್ದಾರೆ. ಈ ರೀತಿಯ ನಿಲುವುಗಳು ಗೋವನ್ನು ಆಹಾರ ಮತ್ತಿತರ ಕಾರಣಗಳಿಗೆ ಅವಲಂಭಿಸಿರುವ ಭಾರತದಲ್ಲಿ ಮುಸ್ಲಿಂರು ಮತ್ತಿತರ ಅಲ್ಪಸಂಖ್ಯಾತರನ್ನು ಅಪರಾಧಿಗಳಂತೆ ಬಿಂಬಿಸುತ್ತಿವೆ. ಈ ರೀತಿಯ ನಡೆಯಿಂದಾಗಿ ಈ ವಿಧಾನವನ್ನು ಇನ್ನೂ ಅಳವಡಿಸಿಕೊಳ್ಳದ ಸಮುದಾಯಗಳು ಅವುಗಳಿಂದ ಹೊರಗುಳಿಯುವ ಅಪಾಯವಿದೆ ಎಂದು ಕೆಲ ವಿಮರ್ಶಕರು ಹೇಳುತ್ತಿದ್ದಾರೆ. ಕುಲಾಂತರಿ ಬೀಜಗಳ ಬಳಕೆ ಕುರಿತು ಮತ್ತೊಂದು ಪ್ರಶ್ನೆ ಎದ್ದಿದೆ. ಆಂಧ್ರ ಪ್ರದೇಶ ಸರ್ಕಾರವು ಈ ವಿಧಾನದಲ್ಲಿ ಕುಲಾಂತರಿ ಹಾಗೂ ಹೈಬ್ರಿಡ್ ಬೀಜಗಳ ಬಳಕೆಯನ್ನು ನಿಷೇಧಿಸಿದೆ. ಉಳಿದ ಗುಂಪುಗಳು ಇದನ್ನು ಬಳಸುತ್ತಿವೆ. ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ ಪದ್ಧತಿಗಳು ಒಳ್ಳೆಯ ಫಲಿತಾಂಶವನ್ನು ನೀಡುತ್ತಿದ್ದರೂ ಕೂಡ  ಕೈಗಾರಿಕೆಯ ಅಗತ್ಯಕ್ಕೆ ತಕ್ಕಂತೆ ಪೂರೈಕೆ ಸಾಧ್ಯವೇ ಎನ್ನುವ ಅನುಮಾನಗಳಿವೆ. ಬಿಟಿ ಹತ್ತಿಯನ್ನು ಅವಲಂಭಿಸಿರುವ ಕೈಗಾರಿಕೆಗಳನ್ನು ಇದಕ್ಕೆ ಉದಾಹರಣೆಯಾಗಿ ನೋಡಬಹುದು.

ಪ್ರಪಂಚದಲ್ಲಿ ಬೈಯಮ್ಮ ರೆಡ್ಡಿಯಂತಹ ಮಹಿಳೆಯರೇ ದೇಸಿ ಬೀಜಗಳ ನಿಜವಾದ ಸಂರಕ್ಷಕರು. ಅವರಿಗಿರುವ ಪಾರಂಪರಿಕ ತಿಳಿವಳಿಕೆಯು ಮಹತ್ತರವಾದುದು. ಬೈಯಮ್ಮನ ಮಕ್ಕಳು ಓದನ್ನು ನಿಲ್ಲಿಸಿದ ನಂತರ ಆಕೆ ತನ್ನ ಮನೆಯ ಹತ್ತಿರವಿದ್ದ ತನ್ನ ಜಮೀನಿನಲ್ಲಿ ನೈಸರ್ಗಿಕ ಕೃಷಿಯನ್ನು ಆರಂಭಿಸಿದಳು. ತನಗೆ ತಲೆಮಾರುಗಳಿಂದ ದತ್ತವಾಗಿ ಬಂದಿದ್ದ ತಿಳಿವಳಿಕೆ ಮತ್ತು ಕೌಶಲ್ಯವನ್ನು ಕೃಷಿಯಲ್ಲಿ ಬಳಸಿಕೊಂಡಳು.  ಆಕೆ ಆಂಧ್ರಪ್ರದೇಶದ ಬಾಳಕಬ್ರಿ ಪಲ್ಲಿಯವಳು. ಇದು ದೇಶದ ಬರಪೀಡಿತ ಪ್ರದೇಶಗಳಲ್ಲೊಂದು. ಈ ಪ್ರದೇಶದಲ್ಲಿ ಹೆಚ್ಚಿನ ನೀರಾವರಿಯನ್ನು ಹಾಗೂ ದುಬಾರಿ ಒಳಸುರಿಯುವಿಕೆಗಳನ್ನು ಬೇಡುವಂತಹ ವಾಣಿಜ್ಯ ಬೆಳೆಗಳನ್ನು ಬೆಳೆಯುವುದು ಅಸಾಧ್ಯ. ಆಹಾರದಲ್ಲಿ ವೈವಿಧ್ಯ ಮತ್ತು ಬೆಳೆನಷ್ಟದ ಅಪಾಯವನ್ನು ತಡೆಯಲು ಆಕೆ ಮತ್ತು ಆಕೆಯ ಗಂಡ ಸಾಂಪ್ರದಾಯಿಕ ಪದ್ಧತಿಯಾದ ನವಧಾನ್ಯ (ಒಂಭತ್ತು ಕಾಳುಗಳು ಮತ್ತು ಕಿರುಧಾನ್ಯಗಳ ಬಿತ್ತನೆ)ಗಳನ್ನು ಮಳೆಗಾಲಕ್ಕೆ ಮೊದಲು ಬಿತ್ತನೆ ಮಾಡುತ್ತಾರೆ.

ಕವಿತ ಕುರುಗಂಟಿ ಆಶಾ ಎನ್ನುವ ಸುಸ್ಥಿರ ಮತ್ತು ಸಮಗ್ರ ಕೃಷಿ ಸಂಸ್ಥೆಯ ಸಂಸ್ಥಾಪಕಿ. ಆಕೆ ರಾಷ್ಟ್ರಮಟ್ಟದ ಮಕ್ಕಂ ಎನ್ನುವ ಸಂಸ್ಥೆಯೊಂದಿಗೂ ಸಂಬಂಧ ಹೊಂದಿದ್ದಾರೆ. ಇದರಲ್ಲಿ 24 ರಾಜ್ಯಗಳ



**ಜಗದೀಶ್ ಐದು ಹಂತಗಳ ಮಾದರಿಯ ನೈಸರ್ಗಿಕ ಕೃಷಿಯನ್ನು ಕೈಗೊಂಡಿದ್ದಾರೆ. ಇದರಲ್ಲಿ ತೋಟಕ್ಕಿಂತ ಕಾಡೇ ಹೆಚ್ಚಿರುತ್ತದೆ.**



**ಬೈಯಮ್ಮ ರೆಡ್ಡಿ**



ಕವಿತ ಕುರುಗಂಟಿ

120 ಕ್ಕೂ ಹೆಚ್ಚು ಮಂದಿ, ಮಹಿಳಾ ಕೃಷಿಕರು ಒಟ್ಟಾಗಿ ಕೆಲಸ ಮಾಡುತ್ತಿದ್ದಾರೆ. ಇವರು ಭಾರತದಲ್ಲಿನ ಮಹಿಳಾ ಕೃಷಿಕರ ಹಕ್ಕುಗಳ ಸಂರಕ್ಷಣೆಗಾಗಿ ಕೆಲಸ ಮಾಡುತ್ತಿದ್ದಾರೆ. ಇತ್ತೀಚಿನ ಸಂದರ್ಶನದಲ್ಲಿ ಕವಿತಾ ಅವರು ಸಾಂಪ್ರದಾಯಿಕವಾಗಿ ಮಹಿಳೆಯರನ್ನು ಬಿತ್ತನೆ, ಕಳೆ ಕೀಳುವುದು ಮತ್ತು ಕೊಯ್ಲಿನಂತಹ ಶ್ರಮದಾಯಕ ಕೆಲಸಗಳಲ್ಲಿ ಹೇಗೆ ಬಳಸಿಕೊಳ್ಳುತ್ತಿದ್ದರು ಎಂದು ವಿವರಿಸಿದ್ದಾರೆ. "ಕೃಷಿಯು ಮಾರುಕಟ್ಟೆ, ಕೈಗಾರಿಕೆ, ಯಂತ್ರಗಳನ್ನು ಆಧರಿಸಲು ತೊಡಗಿದಾಗಿನಿಂದ ಪುರುಷರೇ ನಿರ್ಧಾರ ತೆಗೆದುಕೊಳ್ಳಲಾರಂಭಿಸಿದ್ದಾರೆ" ಎಂದು ಆಕೆ ಹೇಳುತ್ತಾರೆ. ಕೃಷಿ ಪರಿಸರ ವಿಜ್ಞಾನವನ್ನು ಅನುಸರಿಸುವುದರಿಂದ ಮಹಿಳೆಯರು ನಿರ್ಧಾರ ತೆಗೆದುಕೊಳ್ಳುವ ತಮ್ಮ ಹಕ್ಕನ್ನು ಮತ್ತೆ ಪಡೆಯುತ್ತಾರೆ.

◆

*ಈ ಫೋಟೋಗಳನ್ನು ತೆಗೆದವರು ಸೌಮ್ಯ ಶಂಕರ್ ಬೋಸ್. ಅಮೃತ ಅವರು ಅದರ ವಿವರಣೆಯನ್ನು ಬರೆದಿರುವರು. ಇವರು ಆಗ್ರೋಇಕಾಲಜಿ ಫಂಡ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವರು.*

ಮಿಂಚಂಚೆ ವಿಳಾಸ:
amrita.agroecologyfund@gmail.com

*ಈ ಫೋಟೊ ಸ್ಟೋರಿಯನ್ನು ಅವರು ಫೆಬ್ರವರಿ 2020ರಲ್ಲಿ ಒಂದು ವಾರದ ಮಟ್ಟಿಗೆ ನಡೆದ ಕಲಿಕಾ ವಿನಿಮಯ ಕಾರ್ಯಾಗಾರದಲ್ಲಿ ಅವರು ಮಾಡಿದ ಕ್ಷೇತ್ರ ಭೇಟಿ ಮತ್ತು ಕಾರ್ಯಾಗಾರದ ಆಧಾರದ ಮೇಲೆ ರಚಿಸಿದ್ದಾರೆ. ಈ ಕಾರ್ಯಾಗಾರದಲ್ಲಿ 30 ದೇಶಗಳ ಸರಿಸುಮಾರು ನೂರು ಮಂದಿ ಕೃಷಿಪರಿಸರ ವಿಜ್ಞಾನವನ್ನು ಅಭ್ಯಸಿಸುತ್ತಿರುವವರು, ವಕೀಲರು, ಸಂಶೋಧಕರು ಮತ್ತು ನೀತಿರೂಪಕರು ಭಾಗವಹಿಸಿದ್ದರು.*

**ಆಂಗ್ಲ ಮೂಲ :**
ಫಾರ್ಮಿಂಗ್ ಮ್ಯಾಟರ್ಸ್– ಅಕ್ಟೋಬರ್ 2020.